# ಜೈವಿಕವೈವಿಧ್ಯ ಅಧಿನಿಯಮ, 2002

## ಪರಿವಿಡಿ

### ಅಧ್ಯಾಯ - I


ಕ್ರ ಸಂ. ಪೀಠಿಕೆ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅರ್ಥ ವಿವರಣೆಗಳು

ಅಧ್ಯಾಯ – II

ಜೈವಿಕವೈವಿಧ್ಯವನ್ನು ಪಡೆದಿಕೊಳ್ಳುವ ಅವಕಾಶಕ್ಕೆ ವಿನಿಯಮ

3. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಜೈವಿಕವೈವಿಧ್ಯ ಸಂಬಂಧಿ ಚಟುವಟಿಕೆಗಳನ್ನು ಕೈಗೊಳ್ಳಲು ಕೆಲವು ವ್ಯಕ್ತಿಗಳ ಮೇಲೆ ನಿರ್ಬಂಧ
4. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಸಂಶೋಧನೆಯ ಫಲಿತಾಂಶ ಗಳನ್ನು ಕೆಲವು ವ್ಯಕ್ತಿಗಳಿಗೆ ವರ್ಗಾಯಿಸತಕ್ಕದ್ದಲ್ಲ
5. ಕೆಲವು ಸಹಭಾಗಿತ್ವ ಸಂಶೋಧನಾ ಯೋಜನೆಗಳಿಗೆ 3 ಮತ್ತು 4ನೇ ಪ್ರಕರಣಗಳು ಅನ್ವಯವಾಗ ತಕ್ಕದ್ದಲ್ಲ
6. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಬೌದ್ಧಿಕ ಆಸ್ತಿ ಹಕ್ಕಿಗೆ ಅರ್ಜಿಸಲ್ಲಿಸತಕ್ಕದ್ದಲ್ಲ
7. ಕೆಲವು ಉದ್ದೇಶಗಳಿಗೆ ಜೈವಿಕ ಸಂಪನ್ಮೂಲಗಳನ್ನು ಪಡೆಯುವುದಕ್ಕಾಗಿ ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಮುಂಚಿತವಾಗಿ ತಿಳಿಸುವುದು

ಅಧ್ಯಾಯ - III

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ

8. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸ್ಥಾಪನೆ
9. ಅಧ್ಯಕ್ಷರ ಮತ್ತು ಸದಸ್ಯರ ಸೇವಾ ಷರತ್ತುಗಳು
10. ಅಧ್ಯಕರು-ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಮುಖ್ಯಕಾರ್ಯ ನಿರ್ವಾಹಣಾಧಿಕಾರಿಯಾಗಿರುತ್ತಾರೆ
11. ಸದಸ್ಯರನ್ನು ತೆಗೆದುಹಾಕುವುದು
12. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸಭೆಗಳು
13. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸಮಿತಿ ಗಳು
14. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು
15. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಆದೇಶ ಗಳು ಮತ್ತು ತೀರ್ಮಾನಗಳನ್ನು ಅಧಿಕೃತಗೊಳಿ ಸುವುದು
16. ಅಧಿಕಾರಗಳ ಪ್ರತ್ಯಾಯೋಜನೆ
17. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ವೆಚ್ಚ ಗಳನ್ನು ಭಾರತದ ಸಂಚಿತ ನಿಧಿಯಿಂದ ಭರಿಸುವುದು

ಅಧ್ಯಾಯ - IV

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು

18. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**ಅಧ್ಯಾಯ - V**

**ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ**

19. ಕೆಲವು ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ

20. ಜೈವಿಕ ಸಂಪನ್ಮೂಲ ಅಥವಾ ಜ್ಞಾನದ ವರ್ಗಾವಣೆ

21. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ನ್ಯಾಯಸಮ್ಮತ ಲಾಭದ ಹಂಚಿಕೆಯನ್ನು ನಿರ್ಧರಿಸುವುದು

**ಅಧ್ಯಾಯ - VI**

**ರಾಜ್ಯ ಜೈವಿಕವೈವಿಧ್ಯ ಮಂಡಳಿ**

22. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಸ್ಥಾಪನೆ

23. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಪ್ರಕಾರ್ಯಗಳು

24. ಕೆಲವು ಕಾರ್ಯಚಟುವಟಿಕೆಗಳನ್ನು ನಿರ್ಬಂಧಿಸಲು ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಅಧಿಕಾರ

25. 9ನೇ ಪ್ರಕರಣದಿಂದ 17ನೇ ಪ್ರಕರಣದವರೆಗಿನ ಉಪಬಂಧಗಳು ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕದ್ದು

**ಅಧ್ಯಾಯ –VII**

**ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ**

26. ಕೇಂದ್ರ ಸರಕಾರದಿಂದ ಅನುದಾನಗಳು ಅಥವಾ ಸಾಲಗಳು

27. ರಾಷ್ಟ್ರೀಯ ಜೈವಿಕವೈವಿಧ್ಯ ನಿಧಿಯ ರಚನೆ

28. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ವಾರ್ಷಿಕ ವರದಿ

29. ಆಯವ್ಯಯ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

30. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸತಕ್ಕದ್ದು

**ಅಧ್ಯಾಯ – VIII**

**ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಹಣಕಾಸು,ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ**

31. ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ರಾಜ್ಯ ಸರ್ಕಾರದಿಂದ ನೀಡಲಾಗುವ ಅನುದಾನ

32. ರಾಜ್ಯ ಜೈವಿಕವೈವಿಧ್ಯ ನಿಧಿಯ ಸ್ಥಾಪನೆ

33. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ವಾರ್ಷಿಕ ವರದಿ

34. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಲೆಕ್ಕಗಳ ಲೆಕ್ಕಪರಿಶೋಧನೆ

35. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ವಾರ್ಷಿಕ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು

**ಅಧ್ಯಾಯ - IX**

**ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯಗಳು**

36. ಕೇಂದ್ರ ಸರ್ಕಾರವು, ಜೈವಿಕವೈವಿಧ್ಯದ ಸಂರಕ್ಷಣೆ ಮುಂತಾದವುಗಳಿಗಾಗಿ ರಾಷ್ಟ್ರೀಯ ಕಾರ್ಯತಂತ್ರಗಳು, ಯೋಜನೆಗಳು ಮುಂತಾದವುಗಳನ್ನು ರೂಪಿಸುವುದು

37. ಜೈವಿಕವೈವಿಧ್ಯದ ಪರಂಪರಾಗತ ತಾಣಗಳು

38. ಅಪಾಯದ ಅಂಚಿನಲ್ಲಿರುವ ಪ್ರಭೇದಗಳನ್ನು ಅಧಿಸೂಚಿಸಲು ಕೇಂದ್ರ ಸರ್ಕಾರದ ಅಧಿಕಾರ

39. ಸಂಗ್ರಹಾಲಯಗಳನ್ನು ಹೆಸರಿಸಲು ಕೇಂದ್ರ ಸರ್ಕಾರದ ಅಧಿಕಾರ

40. ಕೆಲವು ಜೈವಿಕ ಸಂಪನ್ಮೂಲಗಳಿಗೆ ವಿನಾಯಿತಿ ನೀಡಲು ಕೇಂದ್ರ ಸರಕಾರದ ಅಧಿಕಾರ

## ಅಧ್ಯಾಯ – X

## ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳು

41. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ರಚನೆ

## ಅಧ್ಯಾಯ – XI

## ಸ್ಥಳೀಯ ಜೈವಿಕವೈವಿಧ್ಯ ನಿಧಿ

42. ಸ್ಥಳೀಯ ಜೈವಿಕವೈವಿಧ್ಯ ನಿಧಿಗೆ ಅನುದಾನಗಳು

43. ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಸ್ಥಾಪನೆ

44. ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಬಳಕೆ

45. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳ ವಾರ್ಷಿಕ ವರದಿ

46. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳ ಲೆಕ್ಕ ಪರಿಶೋಧನೆ

47. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ವಾರ್ಷಿಕ ವರದಿ ಮುಂತಾದವುಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟ ರಿಗೆ ಸಲ್ಲಿಸುವುದು

## ಅಧ್ಯಾಯ - XII

### ಸಂಕೀರ್ಣ

48. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಕೇಂದ್ರ ಸರಕಾರವು ನೀಡುವ ನಿರ್ದೇಶನಗಳಿಗೆ ಬದ್ಧವಾಗಿರ ತಕ್ಕದ್ದು

49. ನಿರ್ದೇಶನಗಳನ್ನು ಕೊಡುವುದಕ್ಕೆ ರಾಜ್ಯ ಸರಕಾರದ ಅಧಿಕಾರ

50. ರಾಜ್ಯ ಜೈವಿಕವೈವಿಧ್ಯ ಮಂಡಳಿಗಳ ನಡುವಿನ ವಿವಾದಗಳನ್ನು ಇತ್ಯರ್ಥಗೊಳಿಸುವುದು

51. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಮತ್ತು ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಸದಸ್ಯರು, ಅಧಿಕಾರಿಗಳು ಮುಂತಾದವರನ್ನು ಸರಕಾರೀ ನೌಕರ ರೆಂದು ಭಾವಿಸುವುದು

52. ಅಪೀಲು

53. ನಿರ್ಧಾರ ಅಥವಾ ಆದೇಶದ ಜಾರಿ

54. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮಗಳ ರಕ್ಷಣೆ

55. ದಂಡಗಳು

56. ಕೇಂದ್ರ ಸರಕಾರ, ರಾಜ್ಯ ಸರಕಾರ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ, ರಾಜ್ಯ ಜೈವಿಕವೈವಿಧ್ಯ ಮಂಡಳಿಗಳ ನಿರ್ದೇಶನ ಅಥವಾ ಆದೇಶಗಳ ಉಲ್ಲಂಘನೆಗೆ ದಂಡನೆ

57. ಕಂಪನಿಗಳಿಂದ ಅಪರಾಧಗಳು

58. ಸಂಜ್ಞೇಯ ಮತ್ತು ಜಾಮೀನಿಯವಲ್ಲದ ಅಪರಾಧ ಗಳು

59. ಇತರ ಅಧಿನಿಯಮಗಳೊಂದಿಗೆ ಈ ಅಧಿನಿಯಮ ಪರಿಣಾಮಕಾರಿಯಾಗಿರುವುದು

60. ರಾಜ್ಯ ಸರಕಾರಗಳಿಗೆ ನಿರ್ದೇಶನಗಳನ್ನು ನೀಡುವ ಕೇಂದ್ರ ಸರಕಾರದ ಅಧಿಕಾರ

61. ಅಪರಾಧಗಳ ಸಂಜ್ಞೇಯತೆ

62. ಕೇಂದ್ರ ಸರಕಾರದ ನಿಯಮ ರಚನಾಧಿಕಾರ

63. ರಾಜ್ಯ ಸರಕಾರದ ನಿಯಮ ರಚನಾಧಿಕಾರ

64. ವಿನಿಯಮಗಳ ರಚನಾಧಿಕಾರ

65. ತೊಂದರೆಗಳನ್ನು ನಿವಾರಿಸುವ ಅಧಿಕಾರ

**ಕಾನೂನು ಮತ್ತು ನ್ಯಾಯಮಂತ್ರಾಲಯ**

**(ವಿಧಾಯಿ ಇಲಾಖೆ)**

**ನವದೆಹಲಿ**

**5ನೇ ಫೆಬ್ರವರಿ,2003 / ಮಾಘ 16, 1924 (ಶಕ)**

**ಸಂಸತ್ತಿನ ಈ ಅಧಿನಿಯಮವು 5ನೇ ಫೆಬ್ರವರಿ, 2003 ರಂದು ರಾಷ್ಟ್ರಪತಿ ಗಳ ಅಂಗೀಕಾರ ಪಡೆದಿದೆ ಮತ್ತು ಅದನ್ನು ಸಾರ್ವತ್ರಿಕ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ**

# ಜೈವಿಕವೈವಿಧ್ಯ ಅಧಿನಿಯಮ, 2002

**(ಸಂಖ್ಯೆ 2003ರ 18)**

**(5ನೇ ಫೆಬ್ರವರಿ,2003)**

ಜೈವಿಕವೈವಿಧ್ಯಗಳ ಸಂರಕ್ಷಣೆ, ಅವುಗಳ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳು,ಹಾಗೂ ಜ್ಞಾನದ ಬಳಕೆಯಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅನುಷಂಗಿಕ ವಿಷಯಗಳಿಗೆ ಉಪಬಂಧ ಕಲ್ಪಿಸಿದ ಅಧಿನಿಯಮ.

ಭಾರತವು ಜೈವಿಕವೈವಿಧ್ಯ ಮತ್ತು ಅದನ್ನು ಕುರಿತ ಸಾಂಪ್ರದಾಯಿಕ ಮತ್ತು ಸಮಕಾಲೀನ ಜ್ಞಾನ ವ್ಯವಸ್ಥೆಯಲ್ಲಿ ಶ್ರೀಮಂತವಾಗಿರುವುದರಿಂದ,

ದಿನಾಂಕ 5.6.1992ರಂದು ರಿಯೋ ಡಿ ಜನೈರೋದಲ್ಲಿ ಸಹಿ ಹಾಕಿದ ವಿಶ್ವ ಸಂಸ್ಥೆಯ ಜೈವಿಕವೈವಿಧ್ಯ ಒಡಂಬಡಿಕೆಗೆ ಭಾರತ ಭಾಗಿಯಾಗಿ ಸಹಿ ಮಾಡಿರುವುದರಿಂದ;

ಸದರಿ ಒಡಂಬಡಿಕೆಯ 29.12.1993ರಿಂದ ಜಾರಿಗೆ ಬಂದಿರುವುದರಿಂದ;

ಸದರಿ ಒಡಂಬಡಿಕೆಯ ರಾಷ್ಟ್ರಗಳು ತಮ್ಮ ಜೈವಿಕ ಸಂಪನ್ಮೂಲಗಳ ಮೇಲೆ ಅವುಗಳ ಸಾರ್ವಭೌಮ ಹಕ್ಕುಗಳನ್ನು ಹೊಂದಿರುತ್ತವೆಂದು ಪುನರ್ ದೃಢೀಕರಿಸುವುದರಿಂದ,

ಸದರಿ ಒಡಂಬಡಿಕೆಯ ಮುಖ್ಯ ಉದ್ದೇಶವು ಜೈವಿಕವೈವಿಧ್ಯದ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಅನುವಂಶಿಕ ಸಂಪನ್ಮೂಲಗಳ ಉಪಯೋಗದಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಯಾಗಿ ರುವುದರಿಂದ;

ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಅನುವಂಶಿಕ ಸಂಪನ್ಮೂಲಗಳ ಉಪಯೋಗದಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ ಹಂಚಿಕೆಗೆ ಅವಕಾಶ ಕಲ್ಪಿಸುವುದು ಹಾಗೂ ಸದರಿ ಒಡಂಬಡಿಕೆಯನ್ನು ಜಾರಿಗೆ ತರುವುದು ಅವಶ್ಯಕವಾಗಿದೆಯೆಂದು ಪರಿಗಣಿಸಿರುವುದರಿಂದ,

ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿಸಲಾಗಿದೆ.

## ಅಧ್ಯಾಯ – 1

## ಪ್ರಾರಂಭಿಕ

### 1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:-

1. ಈ ಅಧಿನಿಯಮವನ್ನು ಜೈವಿಕವೈವಿಧ್ಯ ಅಧಿನಿಯಮ, 2002 ಎಂದು ಕರೆಯತಕ್ಕದ್ದು
2. ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ
3. ಇದು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ರಾಜಪತ್ರದಲ್ಲಿ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಪರಂತು, ಈ ಅಧಿನಿಯಮದ ವಿವಿಧ ಉಪಬಂಧಗಳಿಗೆ ವಿವಿಧ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಯಾವುದೇ ಅಂತಹ ಉಪಬಂಧ ಗಳಲ್ಲಿನ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬರುವುದರ ಉಲ್ಲೇಖವೆಂದು ಅರ್ಥೈಸತಕ್ಕದ್ದು.

### 2. ಅರ್ಥ ವಿವರಣೆಗಳು:-

**ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ವಿರದಿದ್ದರೆ,**

(ಎ) **" ಲಾಭದ ಕ್ಲೇಮುದಾರ"** ಎಂದರೆ, ಜೈವಿಕ ಸಂಪನ್ಮೂಲಗಳು ಮತ್ತು ಅವುಗಳ ಉಪ ಉತ್ಪನ್ನಗಳ ಸಂರಕ್ಷರು, ಮತ್ತು ಅಂಥ ಜೈವಿಕ ಸಂಪನ್ಮೂಲಗಳ ಬಳಕೆಗೆ ಸಂಬಂಧಪಟ್ಟ ಜ್ಞಾನ ಮತ್ತು ಮಾಹಿತಿಯನ್ನು ಮತ್ತು ಅಂತಹ ಸಂಶೋಧನೆಗಳು ಉಪಯೋಗ ಮತ್ತು ಅನ್ವಯಕ್ಕೆ ಸಂಬಂಧಿಸಿದ ಪದ್ಧತಿಗಳನ್ನು ಸೃಷ್ಟಿಸುವವರು ಮತ್ತು ಹೊಂದಿರುವವರು;

(ಬಿ)**" ಜೈವಿಕವೈವಿಧ್ಯ"** ಎಂದರೆ, ಎಲ್ಲಾ ಮೂಲಗಳ ಮತ್ತು ಅವುಗಳ ಭಾಗವಾಗಿರುವ ಜೀವಿ ಪರಿಸ್ಥಿತಿ ಸಂಕೀರ್ಣಗಳ ಲ್ಲಿರುವ ಉಂಟಾಗುವ ಸಜೀವಿಗಳೊಳಗಿನ ವೈವಿಧ್ಯತೆ ಮತ್ತು ಅದು ಪ್ರಭೇದಗಳೊಳಗಿನ ಅಥವಾ ಪ್ರಭೇದಗಳ ನಡುವಿನ ಮತ್ತು ಪರಿಸರ ವ್ಯವಸ್ಥೆಗಳಲ್ಲಿನ ವೈವಿಧ್ಯವನ್ನು ಒಳಗೊಳ್ಳುತ್ತದೆ.

(ಸಿ) **"ಜೈವಿಕ ಸಂಪನ್ಮೂಲಗಳು"** ಎಂದರೆ, ಸಸ್ಯಗಳು, ಪ್ರಾಣಿಗಳು ಮತ್ತು ಸೂಕ್ಷ್ಮಾಣು ಜೀವಿಗಳು ಅಥವಾ ಅದರ ಭಾಗಗಳು, ವಾಸ್ತವಿಕ ಅಥವಾ ಸಮರ್ಥ ಉಪಯೋಗ ಅಥವಾ ಮೌಲ್ಯವುಳ್ಳ ಅವುಗಳ ವಂಶವಾಹಿ ವಸ್ತುಗಳು ಮತ್ತು ಉಪ ಉತ್ಪನ್ನಗಳು (ಮೌಲ್ಯವರ್ಧಿತ ಉತ್ಪನ್ನಗಳು ಹೊರತುಪಡಿಸಿ) ಆದರೆ ಮಾನವ ವಂಶವಾಹಿ ವಸ್ತುಗಳನ್ನು ಒಳಗೊಳ್ಳುವುದಿಲ್ಲ.

**(ಡಿ) "ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆ"** ಎಂದರೆ, ಯಾವುದೇ ಉದ್ದೇಶಕ್ಕಾಗಿ ಪ್ರಭೇದಗಳ ಉಪಪ್ರಭೇದ ಗಳ, ವಂಶವಾಹಿಗಳ, ಜೈವಿಕ ಸಂಪನ್ಮೂಲಗಳ ಅಂಗ ಭಾಗಗಳ ಮತ್ತು ಸಾರಗಳ ಸಮೀಕ್ಷೆ ಮತ್ತು ಸಂಗ್ರಹ, ಇದು ಗುಣಲಕ್ಷಣ ವಿವರಣೆ, ದಾಖಲೆ ಪಟ್ಟಿ ಸಿದ್ಧತೆ ಮತ್ತು ಜೈವಿಕ ವಿಶ್ಲೇಷಣೆಯನ್ನು ಒಳಗೊಳ್ಳುತ್ತದೆ.

(ಇ) **"ಅಧ್ಯಕ್ಷ"** ಎಂದರೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ಸಂದರ್ಭಾನುಸಾರ ಜೈವಿಕವೈವಿಧ್ಯ ಮಂಡಳಿಯ ಅದರ ಅಧ್ಯಕ್ಷ.

**(ಎಫ್) "ವಾಣಿಜ್ಯ ಬಳಕೆ"** ಎಂದರೆ,ಔಷಧ,ಕೈಗಾರಿಕಾ ಕಿಣ್ವ,ಆಹಾರ ಸುವಾಸನೆ, ಪರಿಮಳ, ಪ್ರಸಾಧನ, ಎಮಲ್ಷಿಫೈಯರ್ (ಸೌಂದರ್ಯವರ್ಧಕ),ಒಲಿಯೋ ರೆಸಿನ್ಸ್,ಬಣ್ಣಗಳು,ಬೆಳೆಗಳು ಮತ್ತು ಜಾನುವಾರುಗಳ ಸುಧಾರಿಸುವುದಕ್ಕಾಗಿ ವಂಶವಾಹಿನಿಗಳಲ್ಲಿ ವ್ಯತ್ಯಾಸವುಂಟು ಮಾಡಲು ಬಳಸುವ ವಂಶವಾಹಿಗಳಂತಹ ವಾಣಿಜ್ಯ ಉಪಯೋಗಕ್ಕಾಗಿ ಬಳಸುವ ಜೈವಿಕ ಸಂಪನ್ಮೂಲಗಳ,ಬಳಕೆಗಳು, ಆದರೆ ಇದು ಕೃಷಿ, ತೋಟಗಾರಿಕೆ, ಕೋಳಿ ಸಾಕಣೆ,ಹೈನುಗಾರಿಕೆ, ಪಶುಸಂಗೋಪನೆ,ಅಥವಾ ಜೇನು ಸಾಕಣೆಯಲ್ಲಿ ಆಚರಣೆಯಲ್ಲಿರುವ ಸಾಂಪ್ರದಾಯಿಕ ತಳಿ ಅಭಿವೃದ್ಧಿ ಅಥವಾ ರೂಢಿಗತ ಪದ್ಧತಿಗಳನ್ನು ಒಳಗೊಳ್ಳುವುದಿಲ್ಲ.

**(ಜಿ) "ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತ"** ಎಂದರೆ 21ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದಿಂದ ನಿರ್ಧರಿಸಲಾಗುವಂತೆ ಲಾಭಗಳನ್ನು ಹಂಚಿಕೊಳ್ಳು ವುದು.

**(ಹೆಚ್) "ಸ್ಥಳೀಯ ಸಂಸ್ಥೆಗಳು"** ಎಂದರೆ, ಸಂವಿಧಾನದ 243ಬಿ ಅನುಚ್ಛೇಧದ ಖಂಡ (1)ನೇ ಮತ್ತು 243ಕ್ಯೂ ಅನುಚ್ಛೇದ(1)ನೇ ಖಂಡದ ಅರ್ಥವ್ಯಾಪ್ತಿಯೊಳಗೆ ಯಾವುದೇ ಹೆಸರಿನಿಂದ ಕರೆಯಲಾಗುವ ಪಂಚಾಯಿತಿಗಳು ಮತ್ತು ಪುರಸಭೆ ಗಳು ಹಾಗು ಪಂಚಾಯಿತಿಗಳು ಮತ್ತು ಪುರಸಭೆಗಳು ಇಲ್ಲದಿರುವಾಗ ಸಂವಿಧಾನದ ಯಾವುದೇ ಇತರ ಉಪಬಂಧ ಅಥವಾ ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದಿಂದ ರಚಿತವಾದ ಸ್ವಯಂ ಆಡಳಿತ ಸಂಸ್ಥೆಗಳು.

**(ಐ) "ಸದಸ್ಯ"** ಎಂದರೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಸದಸ್ಯ ಮತ್ತು ಅಧ್ಯಕ್ಷರನ್ನು ಒಳಗೊಳ್ಳುತ್ತದೆ.

**(ಜೆ) "ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ"** ಎಂದರೆ, 8ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ.

**(ಕೆ) "ನಿಯಮಿಸಲಾದುದು"** ಎಂದರೆ ಈ ಅಧಿನಿಯಮದ ಮೇರೆಗೆ ಮಾಡಲಾದ ನಿಯಮಗಳಿಂದ ನಿಯಮಿಸಲಾದುದು.

**(ಎಲ್) "ವಿನಿಯಮ"** ಎಂದರೆ, ಈ ಅಧಿನಿಯಮದ ಮೇರೆಗೆ ಮಾಡಲಾದ ವಿನಿಯಮಗಳು.

**(ಎಂ) "ಸಂಶೋಧನೆ"** ಎಂದರೆ, ಯಾವುದೇ ಬಳಕೆಗಾಗಿ ಉತ್ಪನ್ನಗಳನ್ನು ಅಥವಾ ಸಂಸ್ಕರಣೆಗಳನ್ನು ಮಾಡಲು ಅಥವಾ ಪರಿವರ್ತಿಸಲು ಜೈವಿಕ ವ್ಯವಸ್ಥೆಗಳು, ಸಜೀವಿಗಳು ಅಥವಾ ಅದರಿಂದ ಉತ್ಪನ್ನವಾದವುಗಳನ್ನು ಉಪಯೋಗಿಸಿಕೊಂಡು ಮಾಡುವ ಯಾವುದೇ ಜೈವಿಕ ಸಂಪಂನ್ಮೂಲ ಅಥವಾ ತಾಂತ್ರಿಕ ಅನ್ವಯದ ಅಧ್ಯಯನ ಅಥವಾ ವ್ಯವಸ್ಥಿತ ಸಂಶೋಧನೆ.

**(ಎನ್) "ರಾಜ್ಯ ಜೀವಿವೈವಿಧ ಮಂಡಳಿ"** ಎಂದರೆ, 22ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಜ್ಯ ಜೈವಿಕವೈವಿಧ್ಯ ಮಂಡಳಿ.

**(ಓ) "ಸುಸ್ಥಿರ ಬಳಕೆ"** ಎಂದರೆ, ಜೈವಿಕವೈವಿಧ್ಯದ ದೀರ್ಘಕಾಲಿಕ ಅವನತಿಗೆ ಆಸ್ಪದ ನೀಡದಂತಹ ರೀತಿಯಲ್ಲಿ ಮತ್ತು ಅಂತಹ ಪ್ರಮಾಣದಲ್ಲಿ ಜೈವಿಕವೈವಿಧ್ಯದ ಘಟಕಾಂಶಗಳನ್ನು ಬಳಸುವ ಮೂಲಕ ಈಗಿನ ಮತ್ತು ಮುಂದಿನ ಜನಾಂಗಗಳ ಅಗತ್ಯತೆ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಅದರ ಸಾಮರ್ಥ್ಯತೆಯನ್ನು ಕಾಪಾಡುವುದು.

**(ಪ) "ಮೌಲ್ಯ ವರ್ಧಿತ ಉತ್ಪನ್ನಗಳು"** ಎಂದರೆ,ಗುರುತು ಹಿಡಿಯಲಾಗದಂತೆ ಮತ್ತು ವಾಸ್ತವಿಕವಾಗಿ ಬೇರ್ಪಡಿಸಲಾಗದಂತೆ ಸಸ್ಯಗಳು ಮತ್ತು ಪ್ರಾಣಿಗಳ ಭಾಗ ಅಥವಾ ಸಾರವನ್ನು ಒಳಗೊಂಡಿರುವ ಉತ್ಪನ್ನಗಳು.

## ಅಧ್ಯಾಯ -II

## ಜೈವಿಕವೈವಿಧ್ಯದ ಪಡೆದಿಕೊಳ್ಳುವ ಅವಕಾಶಕ್ಕೆ ವಿನಿಯಮ

**3. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಜೈವಿಕವೈವಿಧ್ಯ ಸಂಬಂಧಿ ಚಟುವಟಿಕೆಗಳನ್ನು ಕೈಗೊಳ್ಳಲು ಕೆಲವು ವ್ಯಕ್ತಿಗಳ ಮೇಲೆ ನಿರ್ಬಂಧ:-**

1) (2)ನೇ ಉಪ ಪ್ರಕರಣ ಉಲ್ಲೇಖಿಸಿರುವ ಯಾರೇ ವ್ಯಕ್ತಿ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ಸಂಶೋಧನೆಗೆ ಅಥವಾ ವಾಣಿಜ್ಯ ಬಳಕೆಗೆ ಅಥವಾ ಜೈವಿಕ ಸಮೀಕ್ಷೆಗೆ ಅಥವಾ ಜೈವಿಕ ಬಳಕೆಗಾಗಿ ಭಾರತದಲ್ಲಿ ದೊರೆಯುವ ಯಾವುದೇ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನವನ್ನು ಪಡೆದುಕೊಳ್ಳತಕ್ಕದಲ್ಲ.

2) (1)ನೇ ಉಪ ಪ್ರಕರಣದ ಮೇರೆಗೆ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಪಡೆಯುವಂತೆ ಈ ಮುಂದಿನ ವ್ಯಕ್ತಿಗಳನ್ನು ಅಗತ್ಯಪಡಿಸತಕ್ಕದ್ದು ಎಂದರೆ:

ಎ) ಭಾರತದ ಪ್ರಜೆಯಾಗಿರದ ಯಾರೇ ವ್ಯಕ್ತಿ

ಬಿ) ವರಮಾನ ತೆರಿಗೆ ಅಧಿನಿಯಮ, 1961ರ 2ನೇ ಪ್ರಕರಣದ (3)ನೇ ಖಂಡದಲ್ಲಿ ಪರಿಭಾಷಿಸಿರುವ ಅನಿವಾಸಿ ಭಾರತದ ಪ್ರಜೆ

ಸಿ) ಕೆಳಗೆ ವಿವರಿಸಲಾದ ನಿಗಮ, ಸಂಸ್ಥೆ ಅಥವಾ ಸಂಘಟನೆ;

i. ಭಾರತದಲ್ಲಿ ನಿಗಮಿತವಾಗದ ಅಥವಾ ನೋಂದಣಿಯಾಗದ ಅಥವಾ

ii. ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಭಾರತದಲ್ಲಿ ನಿಗ ಮಿತ ವಾಗಿರುವ ಅಥವಾ ನೋಂದಣಿಯಾಗಿರುವ ಆದರೆ ಅದರ ಬಂಡವಾಳ ಅಥವಾ ಆಡಳಿತದಲ್ಲಿ ಯಾರೇ ಭಾರತೀಯರಲ್ಲದವರು ಭಾಗ ವಹಿಸಿರುವ ಸಂಸ್ಥೆಗಳು.

**4. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಸಂಶೋಧನೆಯ ಫಲಿತಾಂಶಗ ಳನ್ನು ಕೆಲವು ವ್ಯಕ್ತಿಗಳಿಗೆ ವರ್ಗಾಯಿಸತಕ್ಕದ್ದಲ್ಲ:-**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ಯಾರೇ ವ್ಯಕ್ತಿಯು ಭಾರತದಲ್ಲಿ ದೊರೆಯುವ ಅಥವಾ ಭಾರತದಿಂದ ಪಡೆದ ಜೈವಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಯಾವುದೇ ಸಂಶೋಧನೆಯ ಫಲಿತಾಂಶಗಳನ್ನು ಆರ್ಥಿಕ ಪ್ರತಿಫಲಕ್ಕಾಗಿ ಅಥವಾ ಬೇರೆ ಉದ್ದೇಶಕ್ಕಾಗಿ ಭಾರತದ ಪ್ರಜೆಯಲ್ಲದ ಅಥವಾ ವರಮಾನ ತೆರಿಗೆ ಅಧಿನಿಯಮ, 1961ರ 2ನೇ ಪ್ರಕರಣದ (3)ನೇ ಖಂಡದಲ್ಲಿ ವಿವರಿಸಿರುವಂತೆ ಅನಿವಾಸಿ ಭಾರತದ ಪ್ರಜೆಯಾಗಿರುವ ಯಾರೇ ವ್ಯಕ್ತಿಗೆ ಅಥವಾ ಭಾರತದಲ್ಲಿ ನೋಂದಣಿಯಾಗದಿರುವ ಅಥವಾ ನಿಗಮಿತವಾಗದಿರುವ ಅಥವಾ ಅದರ ಷೇರು ಬಂಡವಾಳ ಅಥವಾ ಆಡಳಿತದಲ್ಲಿ ಭಾರತೀಯರಲ್ಲದವರ ಭಾಗವಹಿಸುವಿಕೆಯಿರುವ ನಿಗಮ ಅಥವಾ ಸಂಸ್ಥೆಗೆ ವರ್ಗಾಯಿಸತಕ್ಕದ್ದಲ್ಲ.

**ವಿವರಣೆ:**ಈ ಪ್ರಕರಣದ ಉದ್ದೇಶಕ್ಕಾಗಿ,"ವರ್ಗಾವಣೆ" ಎಂಬುದು ಅಂತಹ ಸಂಶೋಧನಾ ಲೇಖನಗಳ ಪ್ರಕಟಣೆ ಅಥವಾ ಯಾವುದೇ ವಿಚಾರ ಸಂಕೀರ್ಣ ಅಥವಾ ಕಾರ್ಯಾಗಾರ ದಲ್ಲಿ/ಪ್ರಸಾರಗೊಂಡ ಜ್ಞಾನವನ್ನು ಅಂಥ ಪ್ರಕಟಣೆಗಳು ಕೇಂದ್ರ ಸರಕಾರ ನೀಡಿರುವ ಮಾರ್ಗದರ್ಶನ ಸೂತ್ರಗಳ ಅನುಸಾರವಾಗಿ ಇದ್ದರೆ, ಒಳಗೊಳ್ಳುವುದಿಲ್ಲ.

**5.ಕೆಲವು ಸಹಭಾಗಿತ್ವ ಸಂಶೋಧನಾ ಯೋಜನೆಗಳಿಗೆ 3 ಮತ್ತು 4ನೇ ಪ್ರಕರಣಗಳು ಅನ್ವಯವಾಗತಕ್ಕದ್ದಲ್ಲ:-**

(1) ಭಾರತ ಸರ್ಕಾರ ಪುರಸ್ಕರಿಸಿರುವ ಸಂಸ್ಥೆಗಳು ಮತ್ತು ಇತರ ದೇಶಗಳಲ್ಲಿರುವ ಅಂತಹ ಸಂಸ್ಥೆಗಳನ್ನೊಳಗೊಂಡಂತೆ ಸಂಸ್ಥೆಗಳ ನಡುವೆ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಿಸಿದ ಮಾಹಿತಿಯ ವರ್ಗಾವಣೆ ಅಥವಾ ವಿನಿಮಯ ವನ್ನೊಳಗೊಂಡ ಸಹಭಾಗಿತ್ವ ಸಂಶೋಧನಾ ಯೋಜನೆಗಳಿಗೆ ಅಂಥ ಸಹಭಾಗಿತ್ವ ಸಂಶೋಧನಾ ಯೋಜನೆಗಳು ಉಪ ಪ್ರಕರಣ (3)ರಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಪಾಲಿಸಿರುವಲ್ಲಿ 3 ಮತ್ತು 4ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದವುಗಳನ್ನು ಹೊರತುಪಡಿಸಿ ಇತರ ಎಲ್ಲಾ ಸಹಭಾಗಿತ್ವ ಸಂಶೋಧನಾ ಯೋಜನೆಗಳು ಈ ಅಧಿನಿಯಮ ಪ್ರಾರಂಭವಾಗುವುದಕ್ಕೆ ಮೊದಲು ಅಂತಿಮಗೊಳಿಸಲಾದ ಒಪ್ಪಂದಗಳನ್ನು ಆಧರಿಸಿದ್ದು ಇನ್ನೂ ಜಾರಿಯಲ್ಲಿದ್ದರೆ, ಅವುಗಳು ಒಪ್ಪಂದದ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೆ ಅಥವಾ (3)ನೇ ಉಪ ಪ್ರಕರಣ (ಎ)ಖಂಡದ ಮೇರೆಗೆ ನೀಡಲಾದ ಮಾರ್ಗದರ್ಶನಗಳಿಗೆ ಅಸಂಗತವಾಗಿದ್ದಲ್ಲಿ ಅಷ್ಟರಮಟ್ಟಿಗೆ ಶೂನ್ಯವಾಗಿರತಕ್ಕದ್ದು.

(3) (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ, ಸಹಭಾಗಿತ್ವ ಸಂಶೋಧನಾ ಯೋಜನೆಗಳು

**ಎ)** ಈ ಸಂಬಂಧದಲ್ಲಿ ಕೇಂದ್ರ ಸರಕಾರದಿಂದ ನೀಡಲಾದ ಕಾರ್ಯನೀತಿ ಮಾರ್ಗದರ್ಶನಗಳಿಗೆ ಅನುಗುಣ ವಾಗಿರತಕ್ಕದ್ದು.

**ಬಿ)** ಕೇಂದ್ರ ಸರಕಾರದಿಂದ ಅನುಮೋದಿತವಾಗಿರತಕ್ಕದ್ದು.

## 6.ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ ಇಲ್ಲದೆ ಬೌದ್ಧಿಕ ಆಸ್ತಿ ಹಕ್ಕಿಗೆ ಅರ್ಜಿ ಸಲ್ಲಿಸತಕ್ಕದ್ದಲ್ಲ:-

1) ಬೌದ್ಧಿಕ ಆಸ್ತಿ ಹಕ್ಕಿಗೆ ಅರ್ಜಿಸಲ್ಲಿಸುವ ಮೊದಲು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆ ಪಡೆಯದೆ, ಭಾರತದಲ್ಲಿ ಅಥವಾ ಭಾರತದ ಹೊರಗಡೆ, ಭಾರತದಿಂದ ಪಡೆಯಲಾದ ಜೈವಿಕ ಸಂಪನ್ಮೂಲಗಳ ಮೇಲಿನ ಯಾವುದೇ ಸಂಶೋಧನೆ ಅಥವಾ ಮಾಹಿತಿಯನ್ನು ಆಧರಿಸಿ ಮಾಡಲಾದ ಯಾವುದೇ ಆವಿಷ್ಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಹೆಸರಿನಿಂದ ಕರೆಯುವ ಯಾವುದೇ ಬೌದ್ಧಿಕ ಆಸ್ತಿ ಹಕ್ಕಿಗೆ ಅರ್ಜಿ ಸಲ್ಲಿಸತಕ್ಕದ್ದಲ್ಲ.

ಪರಂತು, ಒಬ್ಬ ವ್ಯಕ್ತಿಯು ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಪೇಟೆಂಟ್‌ನ್ನು ಅಂಗೀಕರಿಸಿದ ತರುವಾಯ, ಆದರೆ ಸಂಬಂಧಪಟ್ಟ ಪೇಟೆಂಟ್ ಪ್ರಾಧಿಕಾರದಿಂದ ಪೇಟೆಂಟ್ ಹಕ್ಕಿನ ಮುದ್ರೆಯೊತ್ತುವ ಮೊದಲು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮತಿಯನ್ನು ಪಡೆಯತಕ್ಕದ್ದು.

ಮತ್ತು ಪರಂತು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಅದನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗಾಗಿ ಅನುಮತಿಗಾಗಿ ಮಾಡಿದ ಅರ್ಜಿಯನ್ನು ವಿಲೇವಾರಿ ಮಾಡತಕ್ಕದ್ದು.

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಈ ಪ್ರಕರಣದ ಅಡಿಯಲ್ಲಿ ಅನುಮೋದನೆಯನ್ನು ನೀಡುವಾಗ, ಲಾಭ ಹಂಚಿಕೆ ಶುಲ್ಕ ಅಥವಾ ಸ್ವಾಮ್ಯ ಶುಲ್ಕ ಅಥವಾ ಎರಡನ್ನು ವಿಧಿಸಬಹುದು ಅಥವಾ ಅಂಥ ಹಕ್ಕಿನ ವಾಣಿಜ್ಯ ಬಳಕೆಯಿಂದ ಉಂಟಾಗುವ ಹಣಕಾಸಿನ ಲಾಭವನ್ನು ಹಂಚಿಕೊಳ್ಳಬೇಕೆಂಬುದನ್ನೂ ಸೇರಿದಂತೆ ಷರತ್ತುಗಳನ್ನು ವಿಧಿಸಬಹುದು.

3) ಈ ಪ್ರಕರಣದ ಉಪಬಂಧಗಳು ಸಂಸತ್ತಿನಿಂದ ಅಧಿನಿಯಮಿತವಾದ ಸಸ್ಯ ತಳಿಗಳ ಸಂರಕ್ಷಣೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಅಡಿಯಲ್ಲಿ ಯಾವುದೇ ಹಕ್ಕಿಗಾಗಿ ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಗೆ ಅನ್ವಯವಾಗತಕ್ಕದ್ದಲ್ಲ.

4) (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದಂತೆ ಕಾನೂನಿನ ಅಡಿಯಲ್ಲಿ ಯಾವುದೇ ಹಕ್ಕನ್ನು ಮಂಜೂರು ಮಾಡಿದಲ್ಲಿ,ಅಂಥ ಹಕ್ಕಿನ ಮಂಜೂರಾತಿಗೆ ಸಂಬಂಧಿಸಿದ ಪ್ರಾಧಿಕಾರವು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ಅಂಥ ಹಕ್ಕಿನ ಮಂಜೂರಾತಿಯ ದಸ್ತಾವೇಜಿನ ಒಂದು ನಕಲು ಪ್ರತಿಯನ್ನು ಕಳುಹಿಸತಕ್ಕದ್ದು.

**7. ಕೆಲವು ಉದ್ದೇಶಗಳಿಗಾಗಿ ಜೈವಿಕ ಸಂಪನ್ಮೂಲಗಳ ನ್ನು ಪಡೆಯುವುದಕ್ಕಾಗಿ ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಮುಂಚಿತವಾಗಿ ತಿಳಿಸುವುದು:-**

ಭಾರತದ ಒಬ್ಬ ಪ್ರಜೆಯಾಗಿರುವ ಯಾರೇ ವ್ಯಕ್ತಿ ಅಥವಾ ಭಾರತದಲ್ಲಿ ನೋಂದಾಯಿಸಿಕೊಂಡಿರುವ ಒಂದು ನಿಗಮಿತ ನಿಕಾಯ, ಸಂಘ ಅಥವಾ ಸಂಸ್ಥೆಯು ವಾಣಿಜ್ಯ ಬಳಕೆಗಾಗಿ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಪೂರ್ವ ತಿಳುವಳಿಕೆಯನ್ನು ನೀಡಿದ ಹೊರತು ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯತಕ್ಕದ್ದಲ್ಲ.

ಪರಂತು, ಈ ಪ್ರಕರಣದ ಉಪಬಂಧಗಳು ಜೈವಿಕ ವೈವಿಧ್ಯ ಬೆಳೆಗಾರರು ಮತ್ತು ಕೃಷಿಕರು ಸೇರಿದಂತೆ ಸ್ಥಳೀಯ ಜನರಿಗೆ ಮತ್ತು ಆ ಪ್ರದೇಶದ ಸಮುದಾಯಗಳಿಗೆ ಮತ್ತು ದೇಶೀಯ ವೈದ್ಯ ಪದ್ಧತಿಯನ್ನು ನಡೆಸುವ ವೈದ್ಯರು ಮತ್ತು ಹಕೀಮರಿಗೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ -III

## ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ

**8.ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸ್ಥಾಪನೆ:-**

(1) ಕೇಂದ್ರ ಸರಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಕ್ಕಾಗಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಎಂದು ಕರೆಯುವ ಒಂದು ನಿಕಾಯವನ್ನು ಸ್ಥಾಪಿಸತಕ್ಕದ್ದು.

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಮೇಲೆ ತಿಳಿಸಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು. ಇದು ಚರ ಮತ್ತು ಸ್ಥಿರ ಆಸ್ತಿ ಎರಡನ್ನು ಅರ್ಜಿಸುವ, ಹೊಂದಿರುವ ಮತ್ತು ವಿಲೇ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ನಿರಂತರ ಉತ್ತರದಾಯಕತ್ವ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗ ತಕ್ಕದ್ದು.

(3) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಕೇಂದ್ರ ಕಛೇರಿಯು ಚೆನ್ನೈನಲ್ಲಿರತಕ್ಕದ್ದು ಮತ್ತು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಕೇಂದ್ರ ಸರಕಾರದ ಪೂರ್ವಾನು ಮೋದನೆಯನ್ನು ಪಡೆದು ಭಾರತದ ಇತರ ಸ್ಥಳಗಳಲ್ಲಿ ತನ್ನ ಕಛೇರಿಗಳನ್ನು ಸ್ಥಾಪಿಸಬಹುದು.

(4) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು.

**(ಎ)** ಅಧ್ಯಕ್ಷನು, ಜೈವಿಕವೈವಿಧ್ಯ ಸಂರಕ್ಷಣೆಯಲ್ಲಿ ಮತ್ತು ಸುಸ್ಥಿರ ಬಳಕೆಯಲ್ಲಿ ಮತ್ತು ಸರಕಾರದಿಂದ ಗೊತ್ತು ಪಡಿಸಿದ ಲಾಭದ ನ್ಯಾಯ ಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ಸಾಕಷ್ಟು ಜ್ಞಾನ ಮತ್ತು ಅನುಭವವನ್ನು ಹೊಂದಿರುವ ಒಬ್ಬ ಗಣ್ಯ ವ್ಯಕ್ತಿಯಾಗಿರತಕ್ಕದ್ದು.

**(ಬಿ)** ಕೇಂದ್ರ ಸರಕಾರದಿಂದ ನೇಮಕ ಮಾಡಲಾಗುವ ಮೂರು ಜನ ಪದ ನಿಮಿತ್ತ ಸದಸ್ಯರು ಅದರಲ್ಲಿ ಒಬ್ಬರು ಬುಡಕಟ್ಟು ವ್ಯವಹಾರಗಳನ್ನು ನೋಡಿಕೊಳ್ಳುವ ಮಂತ್ರಾಲಯವನ್ನು ಪ್ರತಿನಿಧಿಸುವಂತಹವರು ಮತ್ತು ಇಬ್ಬರು ಪರಿಸರ ಮತ್ತು ಅರಣ್ಯಗಳನ್ನು ನೋಡಿಕೊಳ್ಳುವ ಮಂತ್ರಾಲಯವನ್ನು ಪ್ರತಿನಿಧಿಸು ವಂತಹವರು. ಅವರಲ್ಲಿ ಒಬ್ಬರು ಅರಣ್ಯಗಳ ಅಪರ ಮಹಾ ನಿರ್ದೇಶಕರು ಅಥವಾ ಅರಣ್ಯಗಳ ಮಹಾ ನಿರ್ದೇಶಕರಾಗಿರ ತಕ್ಕದ್ದು.

(ಸಿ) ಕ್ರಮವಾಗಿ ಈ ಮುಂದಿನ ಕೇಂದ್ರ ಸರಕಾರದ ಮಂತ್ರಾಲಯಗಳನ್ನು ಪ್ರತಿನಿಧಿಸುವ ಏಳು ಜನ ಪದ ನಿಮಿತ್ತ ಸದಸ್ಯರನ್ನು ನೇಮಕ ಮಾಡಲಾಗುವುದು-

1. ಕೃಷಿ ಸಂಶೋಧನೆ ಮತ್ತು ಶಿಕ್ಷಣ;
2. ಜೈವಿಕ ತಂತ್ರಜ್ಞಾನ;
3. ಸಾಗರ ಅಭಿವೃದ್ಧಿ;
4. ಕೃಷಿ ಮತ್ತು ಸಹಕಾರ;
5. ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ;
6. ವಿಜ್ಞಾನ ಮತ್ತು ತಂತ್ರಜ್ಞಾನ;
7. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನೆ;

**(ಡಿ)** ಜೈವಿಕವೈವಿಧ್ಯ ಸಂರಕ್ಷಣೆ,ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಉಂಟಾಗುವ ಲಾಭಾದ ನ್ಯಾಯ ಸಮ್ಮತ ಹಂಚಿಕೆ ಇವುಗಳಲ್ಲಿ ವಿಶೇಷ ಜ್ಞಾನ ಅಥವಾ ಅನುಭವವನ್ನು ಹೊಂದಿರುವ ತಜ್ಞರ ಮತ್ತು ವಿಜ್ಞಾನಿಗಳು, ಉದ್ಯಮ ಪ್ರತಿನಿಧಿಗಳು,ಸಂರಕ್ಷಕರು, ಜೈವಿಕ ಸಂಪನ್ಮೂಲಗಳನ್ನು ಸೃಜಿಸುವವರು ಮತ್ತು ಜ್ಞಾನವುಳ್ಳವರ ಪೈಕಿಯಿಂದ ನೇಮಕ ಮಾಡಲಾಗುವ ಐದು ಜನ ಸರ್ಕಾರೇತರ ಸದಸ್ಯರು.

**9. ಅಧ್ಯಕ್ಷ ಮತ್ತು ಸದಸ್ಯರ ಸೇವಾ ಷರತ್ತುಗಳು:-**

ರಾಷ್ಟ್ರೀಯ ಜೈವಿಕ ಪ್ರಾಧಿಕಾರದ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷರ ಮತ್ತು ಇತರ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು ಕೇಂದ್ರ ಸರಕಾರದಿಂದ ನಿಯಮಿಸಬಹುದಾದಂತೆ ಇರತಕ್ಕದ್ದು.

**10. ಅಧ್ಯಕ್ಷನು-ರಾಷ್ಟ್ರೀಯ ಜೈವಿಕ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿರುತ್ತಾರೆ:-**

ಅಧ್ಯಕ್ಷನು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿತಕ್ಕದ್ದು ಮತ್ತು ಅವರು ನಿಗದಿಪಡಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ಪಾಲಿಸತಕ್ಕದ್ದು.

11. ಸದಸ್ಯರನ್ನು ತೆಗೆದುಹಾಕುವುದು:-

ಕೇಂದ್ರ ಸರಕಾರವು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಯಾರೇ ಸದಸ್ಯನು

ಎ) ದಿವಾಳಿ ಎಂಬುದಾಗಿ ನಿರ್ಣೀತನಾಗಿದ್ದಾನೆ ಅಥವಾ

ಬಿ) ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದಾನೆ;

ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಸಮರ್ಥನಾಗಿದ್ದಾನೆ ಅಥವಾ

ಡಿ) ಅವನು ಪದದಲ್ಲಿ ಮುಂದುವರಿದರೆ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುತ್ತದೆ ಎಂಬ ರೀತಿಯಲ್ಲಿ ತನ್ನ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆ; ಅಥವಾ

ಇ) ಒಬ್ಬ ಸದಸ್ಯನಾಗಿ ಅವನ ಕಾರ್ಯ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವವಿರುವಂತೆ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಅರ್ಜಿಸಿದ್ದಾನೆ ಎಂದು ಅಭಿಪ್ರಾಯಪಟ್ಟರೆ,

- ಅವನನ್ನು ತೆಗೆದುಹಾಕಬಹುದು.

12.ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸಭೆಗಳು:-

(1) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ನಿಗದಿಪಡಿಸಿದಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು (ಅದರ ಸಭೆಗಳಲ್ಲಿ ಅದರ ಸಭೆಗ ಳಲ್ಲಿನ ಕೋರಂ ಸೇರಿದಂತೆ) ಕಾರ್ಯ ಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಅಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅಧ್ಯಕ್ಷನು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

(3) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಯಾವುದೇ ಸಭೆಗೆ ಯಾವುದೇ ಕಾರಣದಿಂದಾಗಿ ಅಧ್ಯಕ್ಷನು ಗೈರು ಹಾಜರಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡಿದ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಸಭೆಯಲ್ಲಿ ಹಾಜರಿರುವ ಮತ ಚಲಾಯಿಸುವ ಸದಸ್ಯರು ಬಹುಮತಗಳ ಮೂಲಕ ತೀರ್ಮಾನಿಸತಕ್ಕದ್ದು. ಮತ್ತು ಸಮಾನ ಮತಗಳು ಬಿದ್ದ ಸಂದರ್ಭದಲ್ಲಿ ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

(5) ಸಭೆಯಲ್ಲಿ ತೀರ್ಮಾನಿಸಬೇಕಾದ ಯಾವುದೇ ವಿಷಯದಲ್ಲಿ ಯಾವುದೇ ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಥವಾ ವೈಯಕ್ತಿಕ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ಸದಸ್ಯನು, ತನ್ನ ಸಂಬಂಧದ ಅಥವಾ ಹಿತಾಸಕ್ತಿಯ ಸ್ವರೂಪವನ್ನು ಬಹಿರಂಗಪಡಿಸತಕ್ಕದ್ದು ಮತ್ತು ಹಾಗೆ ಬಹಿರಂಗಪಡಿಸಿದ ತರುವಾಯ ಸಂಬಂಧಪಟ್ಟ ಅಥವಾ ಹಿತಾಸಕ್ತಿಯುಳ್ಳ ಸದಸ್ಯನು ಆ ಸಭೆಗೆ ಹಾಜರಾಗ ತಕ್ಕದ್ದಲ್ಲ.

(6) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಕ್ರಮ ಅಥವಾ ವ್ಯವಹರಣೆಯನ್ನು ಕೇವಲ ಈ ಕೆಳಗಿನ ಕಾರಣಗಳಿಗಾಗಿ ಅಸಿಂಧುಗೊಳಿಸತಕ್ಕದ್ದಲ್ಲ.

ಎ) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದಲ್ಲಿ ಯಾವುದೇ ಸ್ಥಾನ ತೆರವಾಗಿದೆ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇದೆ; ಅಥವಾ

ಬಿ) ಒಬ್ಬ ಸದಸ್ಯನಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ದೋಷವಿದೆ; ಅಥವಾ

(ಸಿ) ಒಂದು ಪ್ರಕರಣದ ಗುಣಗಳಿಗೆ ಬಾಧಕವಾಗ ದಂಥ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಕಾರ್ಯ ವಿಧಾನದಲ್ಲಿನ ಯಾವುದೇ ಅಕ್ರಮ.

**13.ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸಮಿತಿಗ ಳು:-**

(1) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಕೃಷಿ ಜೈವಿಕವೈವಿಧ್ಯವನ್ನು ವ್ಯವಹರಿಸಲು ಒಂದು ಸಮಿತಿಯನ್ನು ರಚಿಸಬಹುದು

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ **"ಕೃಷಿ ಜೈವಿಕವೈವಿಧ್ಯ"** ಎಂದರೆ ಕೃಷಿ ಸಂಬಂಧಿ ಪ್ರಭೇದಗಳ ಮತ್ತು ಅವುಗಳ ಜೊತೆ ಸಾಮ್ಯತೆ ಇರುವ ವನ್ಯ ಪ್ರಭೇದಗಳ ಲ್ಲಿರುವ ಜೈವಿಕವೈವಿಧ್ಯ.

(2) (1)ನೇ ಉಪ ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ,ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು,ಈ ಅಧಿನಿಯಮದ ಅಡಿಯಲ್ಲಿ ಅದರ ಕರ್ತವ್ಯಗಳನ್ನು ದಕ್ಷವಾಗಿ ನಿರ್ವಹಿಸುವುದಕ್ಕಾಗಿ ಮತ್ತು ಅದರ ಪ್ರಕಾರ್ಯಗಳನ್ನು ಪಾಲಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಸಮಿತಿಗಳನ್ನು ರಚಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಸಮಿತಿಯು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸದಸ್ಯರಲ್ಲದ ವ್ಯಕ್ತಿಗಳನ್ನು ತನಗೆ ಸೂಕ್ತವೆನಿಸುವಷ್ಟು ಸಂಖ್ಯೆಯಲ್ಲಿ ಸಹ-ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು ಮತ್ತು ಹಾಗೆ ಸಹ-ಸದಸ್ಯರಾಗಿ ಆಯ್ಕೆಯಾದ ವ್ಯಕ್ತಿಗಳು ಸಮಿತಿಯ ಎಲ್ಲಾ ಸಭೆಗಳಿಗೆ ಹಾಜರಾಗುವ ಮತ್ತು ಅದರ ವ್ಯವಹರಣೆಗಳಲ್ಲಿ ಭಾಗವಹಿಸುವ ಹಕ್ಕನ್ನೊಂದಿರತಕ್ಕದು. ಆದರೆ, ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(4) (2)ನೇ ಉಪ ಪ್ರಕರಣದ ಅಡಿಯಲ್ಲಿ ಸಮಿತಿಯ ಸದಸ್ಯರಾಗಿ ನೇಮಕಗೊಂಡಿರುವ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ಕೇಂದ್ರ ಸರಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಅಥವಾ ಶುಲ್ಕ ಸ್ವೀಕರಿಸಲು ಹಕ್ಕುಳ್ಳವರಾಗಿರತಕ್ಕದ್ದು.

**14. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅಧಿಕಾರಗಳು ಮತ್ತು ನೌಕರರು:-**

(1) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ ಅವಶ್ಯವೆಂದು ಪರಿಗಣಿಸುವಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು.

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅಂಥ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ನಿಬಂಧನೆ ಮತ್ತು ಷರತ್ತುಗಳು ವಿನಿಯಮನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**15. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಆದೇಶಗಳು ಮತ್ತು ತೀರ್ಮಾನಗಳನ್ನು ಅಧಿಕೃತಗೊಳಿಸುವುದು:-**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಎಲ್ಲ ಆದೇಶಗ ಳು ಮತ್ತು ತೀರ್ಮಾನಗಳನ್ನು ಅಧ್ಯಕ್ಷರ ಸಹಿ ಮೂಲಕ ಅಥವಾ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದಿಂದ ಈ ಪರವಾಗಿ ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನ ಸಹಿಯಿಂದ ಮತ್ತು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದಿಂದ ಜಾರಿ ಮಾಡಿದ ಇತರ ಲಿಖಿತ ಪತ್ರಗಳನ್ನು ಈ ಪರವಾಗಿ ಅಧಿಕೃತಗೊಂಡ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಒಬ್ಬ ಅಧಿಕಾರಿಯ ಸಹಿ ಮೂಲಕ ಅಧಿಕೃತಗೊಳಿಸತಕ್ಕದ್ದು.

**16. ಅಧಿಕಾರಗಳ ಪ್ರತ್ಯಾಯೋಜನೆ:**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಯಾರೇ ಸದಸ್ಯನಿಗೆ, ಅಧಿಕಾರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುದಾದರೂ ಇದ್ದಲ್ಲಿ ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ತಾನು ಅವಶ್ಯಕವೆಂದು ಭಾವಿಸಬಹುದಾದಂಥ (50ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿ ಸಲ್ಲಿಸುವ ಅಧಿಕಾರ ಮತ್ತು 64ನೇ ಪ್ರಕರಣದ ಅಡಿಯಲ್ಲಿ ವಿನಿಯಮಗಳನ್ನು ಮಾಡುವ ಅಧಿಕಾರವನ್ನು ಹೊರತುಪಡಿಸಿ) ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

**17. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ವೆಚ್ಚಗಳ ನ್ನು ಭಾರತದ ಸಂಚಿತ ನಿಧಿಯಿಂದ ಭರಿಸುವುದು:-**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ, ಅಥವಾ ಅವರ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳನ್ನು ಒಳಗೊಂಡಂತೆ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಭಾರತದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

# ಅಧ್ಯಾಯ – IV

## ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**18. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪ್ರಕಾರ್ಯ**
**ಗಳು ಮತ್ತು ಅಧಿಕಾರಗಳು:-**

1) 3,4 ಮತ್ತು 6ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಕಾರ್ಯಚಟುವಟಿಕೆಗಳನ್ನು ವಿನಿಯಮಿಸುವುದು ಮತ್ತು ವಿನಿಯಮಗಳ ಮೂಲಕ ಜೈವಿಕ ಸಂಪನ್ಮೂಲಗಳ ಬಳಕೆಯ ಅವಕಾಶಕ್ಕಾಗಿ ಹಾಗೂ ಲಾಭದ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಲಾಭಾಂಶ ಹಂಚಿಕೆಗಾಗಿ ಮಾರ್ಗ ದರ್ಶಿ ಸೂತ್ರಗಳನ್ನು ಹೊರಡಿಸುವುದು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು

2)ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, 3,4 ಮತ್ತು 6ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಯಾವುದೇ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಅನುಮೋದನೆಯನ್ನು ನೀಡಬಹುದು.

**3) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ:-**

**ಎ)** ಜೈವಿಕವೈವಿಧ್ಯ ಸಂರಕ್ಷಣೆ,ಅದರ ಘಟಕಾಂಶಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲ ಗಳ ಉಪಯೋಗದಿಂದ ಲಭ್ಯವಾಗುವ ಲಾಭದ ನ್ಯಾಯ ಸಮ್ಮತ ಹಂಚಿಕೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಕೇಂದ್ರ ಸರಕಾರಕ್ಕೆ ಸಲಹೆ ನೀಡಬಹುದು;

**ಬಿ)** 37ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಪರಂಪರಾಗತ ತಾಣಗಳೆಂದು ಅಧಿಸೂಚಿಸಬೇಕಾದ ಜೈವಿಕವೈವಿಧ್ಯ ಮಹತ್ವದ ಪ್ರದೇಶಗ ಳ ಆಯ್ಕೆಯಲ್ಲಿ ಮತ್ತು ಅಂಥ ಪರಂಪರಾಗತ ತಾಣಗಳ ನಿರ್ವಹಣೆಗಾಗಿ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಬಹುದು;

ಸಿ) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಅಗತ್ಯವಿರಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸಬಹುದು;

4) ಭಾರತದಿಂದ ಪಡೆದ ಯಾವುದೇ ಜೈವಿಕ ಸಂಪನ್ಮೂಲ ಅಥವಾ ಭಾರತದಿಂದ ಪಡೆದ ಅಂಥ ಜೈವಿಕ ಸಂಪನ್ಮೂಲಕ್ಕೆ ಸಂಬಂಧಪಟ್ಟ ಜ್ಞಾನದ ಮೇಲಿನ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಭಾರತದ ಹೊರಗಿನ ಯಾವುದೇ ದೇಶಕ್ಕೆ ನೀಡುವುದನ್ನು ವಿರೋಧಿಸುವುದಕ್ಕೆ ಅಗತ್ಯವಾದ ಯಾವುದೇ ಕ್ರಮಗಳನ್ನು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಕೇಂದ್ರ ಸರ್ಕಾರದ ಪರವಾಗಿ, ತೆಗೆದುಕೊಳ್ಳಬಹುದು.

## ಅಧ್ಯಾಯ – V

### ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ

**19. ಕೆಲವು ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮೋದನೆ:-**

1) 3ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು, ಭಾರತದಲ್ಲಿ ಲಭ್ಯವಿರುವ ಯಾವುದೇ ಜೈವಿಕ ಸಂಪನ್ಮೂಲವನ್ನು ಅಥವಾ ಅದಕ್ಕೆ ಸಂಬಂಧಪಟ್ಟ ಜ್ಞಾನವನ್ನು ಸಂಶೋಧನೆಗಾಗಿ ಅಥವಾ ವಾಣಿಜ್ಯ ಉಪಯೋಗ ಕ್ಕಾಗಿ, ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಉಪಯೋಗಕ್ಕಾಗಿ, ಪಡೆಯುವುದಕ್ಕೆ ಉದ್ದೇಶಿಸಿದರೆ ಅಥವಾ ಭಾರತದಲ್ಲಿ ಲಭ್ಯವಿರುವ ಅಥವಾ ಭಾರತದಿಂದ ಪಡೆದ ಜೈವಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಯಾವುವೇ ಸಂಶೋಧನಾ ಫಲಿತಾಂಶಗಳನ್ನು, ವರ್ಗಾಯಿಸುವುದಕ್ಕೆ ಉದ್ದೇಶಿಸಿದರೆ, ಅವನು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ, ನಿಗದಿಪಡಿಸಬಹುದಾದಂಥ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

(2) 6ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ಭಾರತದಲ್ಲಿ ಅಥವಾ ಭಾರತದ ಹೊರಗೆ ಪೇಟೆಂಟ್ ಅಥವಾ ಬೌದ್ಧಿಕ ಆಸ್ತಿ ರಕ್ಷಣೆಯ ಯಾವುದೇ ಇತರ ಕ್ರಮಕ್ಕೆ ಅರ್ಜಿ ಸಲ್ಲಿಸುವುದಕ್ಕೆ ಉದ್ದೇಶಿಸಿದ ಯಾರೇ ವ್ಯಕ್ತಿಯು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ನಿಗ ದಿ ಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅರ್ಜಿ ಸಲ್ಲಿಸಬಹುದು.

(3) (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ರಾಷ್ಟೀಯ ಜೈವಿಕವೈವಿಧ್ಯ ಪ್ರಾಧಿಕಾರವು, ತಾನು ಯೋಗ್ಯವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡಿದ ತರುವಾಯ, ಮತ್ತು ಅಗತ್ಯವಿದ್ದರೆ ಈ ಉದ್ದೇಶಕ್ಕಾಗಿ ರಚಿಸಿದ ತಜ್ಞರ ಸಮಿತಿಯೊಂದಿಗೆ ಸಮಾಲೋಚಿಸಿದ ತರುವಾಯ, ಈ ಬಗ್ಗೆ ಮಾಡಿದ ಯಾವುವೇ ವಿನಿಯಮಗಳಿಗೆ ಒಳಪಟ್ಟು ಮತ್ತು ಸ್ವಾಮ್ಯ ಶುಲ್ಕದ ರೂಪದಲ್ಲಿ ವೆಚ್ಚಗಳನ್ನು ವಿಧಿಸುವುದೂ ಸೇರಿದಂತೆ ತಾನು ಯೋಗ್ಯವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಆದೇಶದ ಮೂಲಕ, ಅನುಮೋದನೆ ನೀಡಬಹುದು ಅಥವಾ ಲಿಖಿತದಲ್ಲಿ ಕಾರಣಗ ಳನ್ನು ದಾಖಲಿಸಿ ಆ ಅರ್ಜಿಯನ್ನು ತಿರಸ್ಕರಿಸಬಹುದು.

ಪರಂತು, ಬಾಧಿತನಾದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಕೊಟ್ಟ ಹೊರತು ತಿರಸ್ಕರಿಸುವವುದಕ್ಕೆ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(4) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ತಾನು ನೀಡಿದ ಪ್ರತಿಯೊಂದು ಅನುಮೋದನೆಗೆ ಸಾರ್ವಜನಿಕ ನೋಟೀಸು ನೀಡತಕ್ಕದ್ದು.

**20. ಜೈವಿಕ ಸಂಪನ್ಮೂಲ ಅಥವಾ ಜ್ಞಾನದ ವರ್ಗಾವಣೆ:-**

(1) 19ನೇ ಪ್ರಕರಣದ ಅಡಿಯಲ್ಲಿ ಅನುಮೋದನೆ ನೀಡಲಾಗಿರುವ ಯಾರೇ ವ್ಯಕ್ತಿಯು, ಸದರಿ ಅನುಮೋದನೆಯ ವಿಷಯಕ್ಕೆ ಸಂಬಂಧಿಸಿದ ಯಾವುದೇ ಜೈವಿಕ ಸಂಪನ್ಮೂಲ ಅಥವಾ ಅದಕ್ಕೆ ಸಂಬಂಧಪಟ್ಟ ಜ್ಞಾನವನ್ನು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅನುಮತಿಯ ಹೊರತಾಗಿ ವರ್ಗಾಯಿಸತಕ್ಕದ್ದಲ್ಲ.

(2)(1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಜೈವಿಕ ಸಂಪನ್ಮೂಲ ಅಥವಾ ಅದಕ್ಕೆ ಸಂಬಂಧಪಟ್ಟ ಜ್ಞಾನವನ್ನು ವರ್ಗಾಯಿಸುವುದಕ್ಕೆ ಉದ್ದೇಶಿಸಿದ ಯಾರೇ ವ್ಯಕ್ತಿಯು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ನಿಗದಿಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅರ್ಜಿ ಸಲ್ಲಿಸಬಹುದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ತಾನು ಯೋಗ್ಯವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡಿದ ತರುವಾಯ ಮತ್ತು ಅಗ ್ತ್ಯವಿದ್ದರೆ ಈ ಉದ್ದೇಶಕ್ಕಾಗಿ ರಚಿಸಿದ ತಜ್ಞರ ಸಮಿತಿಯೊಂದಿಗೆ ಸಮಾಲೋಚಿಸಿದ ತರುವಾಯ, ಸ್ವಾಮ್ಯ ಶುಲ್ಕದ ರೂಪದಲ್ಲಿ ವೆಚ್ಚಗಳನ್ನು ವಿಧಿಸುವುದೂ ಸೇರಿದಂತೆ ತಾನು ಯೋಗ್ಯವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಆದೇಶದ ಮೂಲಕ, ಅನುಮೋದನೆಯನ್ನು ನೀಡಬಹುದು ಅಥವಾ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಅರ್ಜಿಯನ್ನು ತಿರಸ್ಕರಿಸಬಹುದು.

ಪರಂತು, ಬಾಧಿತ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಕೊಟ್ಟ ಹೊರತು ತಿರಸ್ಕರಿಸುವ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(4) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ತಾನು ನೀಡುವ ಪ್ರತಿಯೊಂದು ಅನುಮೋದನೆಗೆ ಸಾರ್ವಜನಿಕ ನೋಟೀಸು ನೀಡತಕ್ಕದ್ದು.

**21. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ನ್ಯಾಯಸಮ್ಮತ ಲಾಭದ ಹಂಚಿಕೆಯನ್ನು ನಿರ್ಧರಿಸುವುದು:-**

(1) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, 19ನೇ ಪ್ರಕರಣ ಅಥವಾ 20ನೇ ಪ್ರಕರಣಗಳ ಅಡಿಯಲ್ಲಿ ಅನುಮೋದನೆಗಳನ್ನು ನೀಡುವಾಗ, ಅಂಥ ಅನುಮೋದನೆಗಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ಸಂಬಂಧಪಟ್ಟ ಸ್ಥಳೀಯ ನಿಕಾಯಗಳ ಮತ್ತು ಲಾಭದ ಕ್ಲೇಮುದಾರರ ನಡುವಿನ ಪರಸ್ಪರ ಒಡಂಬಡಿಕೆಯ ನಿಬಂಧನೆಗಳು ಮತ್ತು ಷರತ್ತುಗಳ ಅನುಸಾರವಾಗಿ, ಬಳಕೆಯ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಅವುಗಳ ಉಪ ಉತ್ಪನ್ನಗಳು, ಅವುಗಳ ಬಳಕೆ ಮತ್ತು ಅನ್ವಯಗಳಿಗೆ ಸಂಬಂಧಿಸಿದ ಆವಿಷ್ಕಾರಗಳು ಮತ್ತು ಪದ್ಧತಿಗಳಿಂದ ಲಭ್ಯವಾಗುವ ಲಾಭಗಳ ನ್ಯಾಯಸಮ್ಮತ ಹಂಚಿಕೆಯನ್ನು, ಯಾವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದೆಯೋ ಅವು ಸುನಿಶ್ಚಿತಗೊಳಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಈ ಬಗ್ಗೆ ಮಾಡಿದ ಯಾವುವೇ ವಿನಿಯಮಗಳಿಗೆ ಒಳಪಟ್ಟು, ಈ ಮುಂದಿನ ಎಲ್ಲಾ ಅಥವಾ ಯಾವುದೇ ರೀತಿಯಲ್ಲಿ ಜಾರಿಗೊಳಿಸತಕ್ಕ ಲಾಭದ ಹಂಚಿಕೆಯನ್ನು ನಿರ್ಧರಿಸತಕ್ಕದ್ದು, ಎಂದರೆ:-

**ಎ)** ಬೌದ್ಧಿಕ ಹಕ್ಕುಸ್ವಾಮ್ಯದ ಜಂಟಿ ಒಡೆತನವನ್ನು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ಅಥವಾ ಲಾಭದ ಕ್ಲೇಮುದಾರರನ್ನು ಗುರುತಿಸಲಾಗಿದ್ದರೆ, ಅಂಥ ಲಾಭದ ಕ್ಲೇಮುದಾರರಿಗೆ ನೀಡುವುದು.

**ಬಿ)** ತಂತ್ರಜ್ಞಾನವನ್ನು ವರ್ಗಾಯಿಸುವುದು.

**ಸಿ)** ಲಾಭದ ಕ್ಲೇಮುದಾರರ ಜೀವನ ಮಟ್ಟಗಳನ್ನು ಸುಧಾರಿಸುವಂಥ ಪ್ರದೇಶಗಳಲ್ಲಿ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ ಘಟಕಗಳನ್ನು ಸ್ಥಾಪಿಸುವುದು.

**ಡಿ)** ಜೈವಿಕ ಸಂಪನ್ಮೂಲಗಳು ಮತ್ತು ಜೈವಿಕ ಸಮೀಕ್ಷೆ ಹಾಗು ಜೈವಿಕ ಬಳಕೆಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿಯೊಂದಿಗೆ ಭಾರತೀಯ ವಿಜ್ಞಾನಿಗಳು, ಲಾಭದ ಕ್ಲೇಮುದಾರರ ಮತ್ತು ಸ್ಥಳೀಯ ಜನರನ್ನು ಸೇರಿಸಿಕೊಳ್ಳುವುದು.

**ಇ)** ಲಾಭದ ಕ್ಲೇಮುದಾರರಿಗೆ ನೆರವು ನೀಡುವುದಕ್ಕಾಗಿ ಸಹಾಯ ಬಂಡವಾಳ ನಿಧಿಯನ್ನು ಸ್ಥಾಪಿಸುವುದು.

**ಎಫ್)** ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಯೋಗ್ಯವೆಂದು ಭಾವಿಸಬಹುದಾದಷ್ಟು ಹಣಕಾಸು ಪರಿಹಾರವನ್ನು ಮತ್ತು ಹಣಕಾಸೇತರ ಲಾಭಗಳನ್ನು ಲಾಭದ ಕ್ಲೇಮುದಾರರಿಗೆ ಸಂದಾಯ ಮಾಡುವುದು.

3) ಲಾಭದ ಹಂಚಿಕೆಯ ರೂಪದಲ್ಲಿ ಯಾವುದೇ ಒಂದು ಹಣದ ಮೊತ್ತವನ್ನು ಆದೇಶಿಸಿದ್ದರೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಆ ಮೊತ್ತವನ್ನು ರಾಷ್ಟ್ರೀಯ ಜೈವಿಕವೈವಿಧ್ಯ ನಿಧಿಗೆ ಪಾವತಿ ಮಾಡಬೇಕೆಂದು ನಿರ್ದೇಶಿಸಬಹುದು.

ಪರಂತು, ಜೈವಿಕ ಸಂಪನ್ಮೂಲ ಅಥವಾ ಜ್ಞಾನವು, ನಿರ್ದಿಷ್ಟ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಅಥವಾ ಸಂಸ್ಥೆಗಳಿಗೆ ಅವನ್ನು ಪಡೆಯುವ ಅವಕಾಶದಿಂದ ಲಭ್ಯವಾಗಿದ್ದರೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಒಪ್ಪಂದದ ನಿಬಂಧನೆಗಳಿಗನುಸಾರ ಮತ್ತು ಅಂಥ ರೀತಿಯಲ್ಲಿ, ಅಂಥ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಅಥವಾ ಸಂಸ್ಥೆ ಗಳಿಗೆ ನೇರವಾಗಿ ಹಣವನ್ನು ಸಂದಾಯ ಮಾಡತಕ್ಕದೆಂದು ನಿರ್ದೇಶಿಸಬಹುದು.

4) ಈ ಪ್ರಕರಣದ ಉದ್ದೇಶಗಳಿಗಾಗಿ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರಕಾರದೊಡನೆ ಸಮಾಲೋಚಿಸಿ, ವಿನಿಯಮಗಳ ಮೂಲಕ ಮಾರ್ಗದರ್ಶನ ಸೂತ್ರಗಳನ್ನು ರೂಪಿಸತಕ್ಕದ್ದು.

# ಅಧ್ಯಾಯ - VI
# ರಾಜ್ಯ ಜೈವಿಕ ವೈವಿಧ್ಯ ಮಂಡಳಿ

**22.ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಸ್ಥಾಪನೆ:**

**(1)** ರಾಜ್ಯ ಸರಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಬಗ್ಗೆ ನೇಮಕ ಮಾಡಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗು ವಂತೆ,ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಸರ್ಕಾರವು,(ರಾಜ್ಯದ ಹೆಸರು) ಜೈವಿಕವೈವಿಧ್ಯ ಮಂಡಳಿ ಎಂಬ ಹೆಸರಿನಿಂದ ಕರೆಯಲಾಗುವ ರಾಜ್ಯ ಮಂಡಳಿಯನ್ನು ಸ್ಥಾಪಿಸತಕ್ಕದ್ದು.

**(2)** ಈ ಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ರಾಜ್ಯ ಜೈವಿಕವೈವಿಧ್ಯ ಮಂಡಳಿಯನ್ನು ಕೇಂದ್ರಾಡಳಿತ ಪ್ರದೇಶಕ್ಕಾಗಿ ರಚಿಸತಕ್ಕದ್ದಲ್ಲ ಮತ್ತು ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಿಕವೈವಿಧ್ಯ ಮಂಡಳಿಯು, ಆ ಕೇಂದ್ರಾಡಳಿತ ಪ್ರದೇಶಕ್ಕಾಗಿ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಪರಂತು, ಯಾವುದೇ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ,ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರಕಾರವು ನಿರ್ದಿಷ್ಟಪಡಿಸಬಹುದಾದಂಥ ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ ಈ ಉಪ ಪ್ರಕರಣದ ಅಡಿಯಲ್ಲಿನ ಎಲ್ಲಾ ಅಥವಾ ಅದರ ಯಾವುವೇ ಅಧಿಕಾರ ಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

**(3)** ಮಂಡಳಿಯು, ಹಿಂದೆ ಹೇಳಿದ ಹೆಸರಿನಲ್ಲಿ ಶಾಶ್ವತ ಉತ್ತರಾದಿಕಾರ ಮತ್ತು ಸಾಮಾನ್ಯ ಮೊಹರು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಅರ್ಜಿಸುವ, ಹೊಂದುವ ಮತ್ತು ಸ್ವತ್ತನ್ನು ವಿಲೆಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿ ಯಾಗತಕ್ಕದ್ದು.

**(4)** ಮಂಡಳಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ:

**ಎ)** ಅಧ್ಯಕ್ಷ, ಇವನು ಜೈವಿಕವೈವಿಧ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯ ವಿಷಯದಲ್ಲಿ ಮತ್ತು ಲಾಭಗಳ ನ್ಯಾಯ ಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ಸಾಕಷ್ಟು ಜ್ಞಾನ ಮತ್ತು ಅನುಭವ ಹೊಂದಿರುವ, ರಾಜ್ಯ ಸರಕಾರವು ನೇಮಕ ಮಾಡುವ ಪ್ರಸಿದ್ಧ ವ್ಯಕ್ತಿಯಾಗಿರತಕ್ಕದ್ದು.

**ಬಿ)** ರಾಜ್ಯ ಸರಕಾರದ ಸಂಬಂಧಪಟ್ಟ ಇಲಾಖೆಗಳನ್ನು ಪ್ರತಿನಿಧಿಸುವುದಕ್ಕೆ ರಾಜ್ಯ ಸರಕಾರವು ನೇಮಕ ಮಾಡುವ ಐದು ಜನರಿಗಿಂತ ಹೆಚ್ಚಿಲ್ಲದ ಪದನಿಮಿತ್ತ ಸದಸ್ಯರು:

**ಸಿ)** ಜೈವಿಕವೈವಿಧ್ಯ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಪ್ರಾಪ್ತವಾಗುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆ ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿನ ತಜ್ಞರ ಪೈಕಿಯಿಂದ ನೇಮಕ ಮಾಡಲಾಗುವ ಐದು ಜನರಿಗಿಂತ ಹೆಚ್ಚಿಲ್ಲದ ಸದಸ್ಯರು:

5) ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಪ್ರಧಾನ ಕಛೇರಿಯು, ರಾಜ್ಯ ಸರಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾಂಥ ಸ್ಥಳದಲ್ಲಿ ಇರತಕ್ಕದ್ದು.

**23. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಪ್ರಕಾರ್ಯಗಳು:** ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಪ್ರಕಾರ್ಯಗಳು ಈ ಕೆಳಕಂಡಂತಿರುತ್ತವೆ:-

**ಎ)** ಜೈವಿಕವೈವಿಧ್ಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆ ಯಿಂದ ಬರುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆ ಇವುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರಕಾರವು ಹೊರಡಿಸಿದ ಯಾವುವೇ ಮಾರ್ಗದರ್ಶನ ಸೂತ್ರಗ ಳಿಗೆ ಒಳಪಟ್ಟು, ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

**ಬಿ)** ಯಾವುದೇ ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ಅಥವಾ ಮಾಡಿಕೊಂಡ ಇತರ ರೀತಿಯ ಕೋರಿಕೆಗಳನ್ನು ಮಂಜೂರು ಮಾಡುವ ಮೂಲಕ ವಿನಿಯಮಿಸುವುದು.

**ಸಿ)** ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲು ಅಗತ್ಯವಾಗಬಹುದಾಂಥ ಅಥವಾ ರಾಜ್ಯ ಸರಕಾರವು ನಿಯಮಿಸಬಹುದಾದಂಥ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

**24.ಕೆಲವು ಚಟುವಟಿಕೆಗಳನ್ನು ನಿರ್ಬಂಧಿಸಲು ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಅಧಿಕಾರ:-**

(1) 7ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಚಟುವಟಿಕೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸುವ ಭಾರತದ ಯಾರೇ ನಾಗರಿಕ ಅಥವಾ ನಿಗಮಿತ ನಿಕಾಯ, ಭಾರತದಲ್ಲಿ ನೋಂದಣಿ ಮಾಡಿಸಿರುವ ಸಂಘ ಅಥವಾ ಸಂಸ್ಥೆಯು, ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ರಾಜ್ಯ ಸರಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಪೂರ್ವ ಸೂಚನೆ ನೀಡತಕ್ಕದ್ದು.

(2) 1ನೇ ಉಪ ಪ್ರಕರಣದ ಅಡಿಯಲ್ಲಿ ಸೂಚನೆಯನ್ನು ಸ್ವೀಕರಿಸಿದ ತರುವಾಯ ರಾಜ್ಯ ಜೈವಿಕವೈವಿಧ್ಯ ಮಂಡಳಿಯು,ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೊ ಡನೆ ಸಮಾಲೋಚಿಸಿದ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಅದು ಯುಕ್ತವೆನಿಸಬಹುದಾದಂಥ ರೀತಿಯಲ್ಲಿ ಅಂಥ ವಿಚಾರಣೆಗಳನ್ನು ನಡೆಸಿದ ನಂತರ, ಅದು, ಅಂಥ ಕಾರ್ಯ ಚಟುವಟಿಕೆಗಳು, ಜೈವಿಕವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಮತ್ತು ಅಂಥ ಚಟುವಟಿಕೆಗಳಿಂದ ಪ್ರಾಪ್ತವಾಗುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆಯ ಉದ್ದೇಶಗಳಿಗೆ ಬಾಧಕವಾಗಿವೆ ಅಥವಾ ವ್ಯತಿರಿಕ್ತವಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ ಅಂಥ ಯಾವುದೇ ಕಾರ್ಯ ಚಟುವಟಿಕೆಯನ್ನು, ಆದೇಶದ ಮೂಲಕ ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು.

ಪರಂತು,ಬಾಧಿತ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(3) ಪೂರ್ವ ಸೂಚನೆಗಾಗಿ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನಮೂನೆಯಲ್ಲಿ ನೀಡಲಾದ ಯಾವುದೇ ಮಾಹಿತಿಯನ್ನು ಗೌಪ್ಯವಾಗಿಡತಕ್ಕದ್ದು ಮತ್ತು ಅದಕ್ಕೆ ಸಂಬಂಧಪಡದ ಯಾರೇ ವ್ಯಕ್ತಿಗೆ ಉದ್ದೇಶ ಪೂರ್ವಕವಾಗಿಯಾಗಲಿ ಅಥವಾ ಉದ್ದೇಶರಹಿತವಾಗಿಯಾಗಲಿ ಬಹಿರಂಗ ಪಡಿಸತಕ್ಕದ್ದಲ್ಲ.

25. **9ನೇ ಪ್ರಕರಣದಿಂದ 17ನೇ ಪ್ರಕರಣದವರೆಗಿನ ಉಪಬಂಧಗಳು ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕದ್ದು:-**

9ನೇ ಪ್ರಕರಣದಿಂದ 17ನೇ ಪ್ರಕರಣದವರೆಗಿನ ಉಪಬಂಧಗ ಳನ್ನು ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಅನ್ವಯಿಸತಕ್ಕದ್ದು ಮತ್ತು ಈ ಮುಂದಿನ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು, ಎಂದರೆ:

**ಎ)** ಕೇಂದ್ರ ಸರಕಾರಕ್ಕೆ ಮಾಡಲಾದ ಉಲ್ಲೇಖಗ ಳನ್ನು ರಾಜ್ಯ ಸರಕಾರಕ್ಕೆ ಮಾಡಲಾದ ಉಲ್ಲೇಖಗಳು ಎಂದು ಅರ್ಥೈಸತಕ್ಕದ್ದು.

**ಬಿ)** ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ಮಾಡಲಾದ ಉಲ್ಲೇಖಗಳನ್ನು ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ಮಾಡಲಾದ ಉಲ್ಲೇಖಗಳು ಎಂದು ಅರ್ಥೈಸತಕ್ಕದ್ದು.

**ಸಿ)** ಭಾರತದ ಸಂಚಿತ ನಿಧಿಗೆ ಮಾಡಲಾದ ಉಲ್ಲೇಖವನ್ನು ರಾಜ್ಯ ಸಂಚಿತ ನಿಧಿಗೆ ಮಾಡಲಾದ ಉಲ್ಲೇಖ ಎಂದು ಅರ್ಥೈಸತಕ್ಕದ್ದು.

## ಅಧ್ಯಾಯ–VII

## ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**26. ಕೇಂದ್ರ ಸರ್ಕಾರದಿಂದ ಅನುದಾನಗಳು ಅಥವಾ ಸಾಲ ಗಳು:-**

ಕೇಂದ್ರ ಸರಕಾರವು, ಸಂಸತ್ತು ಈ ಬಗ್ಗೆ ಕಾನೂನಿನ ಮೂಲಕ ಯುಕ್ತ ಧನವಿನಿಯೋಗ ಮಾಡಿದ ನಂತರ, ಕೇಂದ್ರ ಸರ್ಕಾರವು ಯುಕ್ತವೆಂದು ಭಾವಿಸಬಹುದಾಂಥ ಮೊತ್ತದ ಹಣವನ್ನು ಅನುದಾನಗಳು ಅಥವಾ ಸಾಲಗಳ ರೂಪದಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸುವುದಕ್ಕಾಗಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

**27.ರಾಷ್ಟ್ರೀಯ ಜೈವಿಕವೈವಿಧ್ಯ ನಿಧಿಯ ರಚನೆ:-**

(1) ರಾಷ್ಟ್ರೀಯ ಜೈವಿಕವೈವಿಧ್ಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ,-

ಎ) 26ನೇ ಪ್ರಕರಣದ ಅಡಿಯಲ್ಲಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ಮಾಡಲಾದ ಯಾವುವೇ ಅನುದಾನಗಳು ಮತ್ತು ಸಾಲಗಳನ್ನು

ಬಿ) ಈ ಅಧಿನಿಯಮದ ಅಡಿಯಲ್ಲಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಸ್ವೀಕರಿಸಿದ ಎಲ್ಲಾ ಶುಲ್ಕಗಳು ಮತ್ತು ಸ್ವಾಮ್ಯ ಶುಲ್ಕಗಳನ್ನು; ಮತ್ತು

ಸಿ) ಕೇಂದ್ರ ಸರಕಾರವು ನಿರ್ಧರಿಸಬಹುದಾಂಥ ಅಂಥ ಇತರ ಮೂಲಗಳಿಂದ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು

-ಜಮೆ ಮಾಡತಕ್ಕದ್ದು.

(2) ನಿಧಿಯನ್ನು,-

ಎ) ಲಾಭದ ಕ್ಲೇಮುದಾರರಿಗೆ ಲಾಭಗಳನ್ನು ನೀಡುವುದಕ್ಕೆ;

ಬಿ) ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಂವರ್ದನೆ ಹಾಗೂ ಯಾವ ಪ್ರದೇಶಗಳಿಂದ ಅಂಥ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಿಸಿದ ಜ್ಞಾನ ಪ್ರಾಪ್ತವಾಗಿದೆಯೋ ಅಂತಹ ಸ್ಥಳಗಳ ಅಭಿವೃದ್ಧಿಗೆ;

ಸಿ) ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೊಡನೆ ಸಮಾಲೋಚಿಸಿ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪ್ರದೇಶಗ ಳ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ

- ಬಳಸತಕ್ಕದ್ದು.

**28. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ವಾರ್ಷಿಕ ವರದಿ:-**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಪ್ರತಿ ಯೊಂದು ಹಣಕಾಸು ವರ್ಷದ ಅಂಥ ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಕಾರ್ಯ ಚಟುವಟಿಕೆಗಳ ಸಂಪೂರ್ಣ ವಿವರಗಳನ್ನು ನೀಡಿ,ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಕೇಂದ್ರ ಸರಕಾರಕ್ಕೆ, ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು, ಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು, ಅದರ ಮೇಲೆ ಲೆಕ್ಕಪರಿಶೋಧಕರು ನೀಡಿರುವ ವರದಿಗಳೊಂದಿಗೆ ಒದಗಿಸ ತಕ್ಕದ್ದು.

**29.ಆಯವ್ಯಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ:-**

(1) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರದಿಂದ ನಿಯಮಿಸಲಾದಂಥ ರೀತಿಯಲ್ಲಿ ಆಯವ್ಯಯವನ್ನು ಸಿದ್ಧಪಡಿಸತಕ್ಕದ್ದು, ಸರಿಯಾದ ಲೆಕ್ಕಪತ್ರಗಳು ಮತ್ತು ಇತರ ಸೂಕ್ತ ದಾಖಲೆಗಳನ್ನು (ರಾಷ್ಟ್ರೀಯ ಜೈವಿಕವೈವಿಧ್ಯ ನಿಧಿಯ ಲೆಕ್ಕಪತ್ರಗಳು ಮತ್ತು ಇತರ ಸೂಕ್ತ ದಾಖಲೆಗ ಳನ್ನೂ ಒಳಗೊಂಡಂತೆ) ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪತ್ರ ಗಳ ವಾರ್ಷಿಕ ವಿವರಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತೀಯ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು, ಅವರು ನಿರ್ದಿಷ್ಟಪಡಿಸಬಹುದಾದಂಥ ಅಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಇಂತಹ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಭರಿಸಿದ ಯಾವುದೇ ವೆಚ್ಚವನ್ನು ಭಾರತ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರಿಗೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದಿಂದ ಸಂದಾಯವಾಗತಕ್ಕದ್ದು.

(3) ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಮತ್ತು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಅವರಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸಾಮಾನ್ಯವಾಗಿ ಸರ್ಕಾರಿ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರುವ ಅಂಥ ಹಕ್ಕುಗಳು ಮತ್ತು ವಿಶೇಷಾಧಿಕಾರಗ ಳು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಿಸಿದ ವೋಚರುಗಳು ಮತ್ತು ಇತರೆ ದಸ್ತಾವೇಜು ಗಳು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವುದಕ್ಕೆ ಮತ್ತು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಯಾವುದೇ ಕಛೇರಿಗಳನ್ನು ತನಿಖೆ ಮಾಡುವುದಕ್ಕೆ ಹಕ್ಕುಹೊಂದಿರತಕ್ಕದ್ದು.

(4) ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರಿಂದ ಅಥವಾ ಈ ಸಂಬಂಧವಾಗಿ ಇವರಿಂದ ನೇಮಕಗೊಂಡ ಯಾರೇ ವ್ಯಕ್ತಿಯಿಂದ ಪ್ರಮಾಣೀಕೃತವಾದ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯ ಜೊತೆಯಲ್ಲಿ ಪ್ರತಿವರ್ಷ ಕೇಂದ್ರ ಸರಕಾರಕ್ಕೆ ಕಳುಹಿಸತಕ್ಕದ್ದು.

**30. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸತಕ್ಕದ್ದು:-**

ವಾಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇವುಗಳನ್ನು ಮಂಡಿಸುವಂತೆ ಕೇಂದ್ರ ಸರಕಾರವು ಮಾಡತಕ್ಕದ್ದು.

## ಅಧ್ಯಾಯ–VIII

## ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ ಹಣಕಾಸು, ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನೆ

**31. ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ರಾಜ್ಯ ಸರಕಾರದಿಂದ ನೀಡಲಾದ ಅನುದಾನ:-**

ರಾಜ್ಯ ಸರ್ಕಾರವು, ಈ ಸಂಬಂಧದಲ್ಲಿ, ರಾಜ್ಯ ವಿಧಾನ ಮಂಡಲವು ಕಾನೂನಿನ ಮೂಲಕ ಯುಕ್ತ ವಿನಿಯೋಗ ಮಾಡಿದ ನಂತರ, ಈ ಅಧಿನಿಯಮದ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಯುಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತವನ್ನು ಅನುದಾನ ಅಥವಾ ಸಾಲಗಳ ರೂಪದಲ್ಲಿ ರಾಜ್ಯ ಸರಕಾರವು ರಾಷ್ಟ್ರೀಯ ಜೈವಿಕವೈವಿಧ್ಯ ಮಂಡಳಿಗೆ ಸಂದಾಯ ಮಾಡಬಹುದು.

**32. ರಾಜ್ಯ ಜೈವಿಕವೈವಿಧ್ಯ ನಿಧಿಯ ಸ್ಥಾಪನೆ:-**

(1)ರಾಜ್ಯ ಜೈವಿಕವೈವಿಧ್ಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ ಈ ಕೆಳಗಿನ ಮೊತ್ತವನ್ನು ಜಮಾ ಮಾಡತಕ್ಕದ್ದು

**ಅ**) ಪ್ರಕರಣ 31 ರಡಿಯಲ್ಲಿ ರಾಜ್ಯ ಜೈವಿಕವೈವಿಧ್ಯ ಮಂಡಳಿಗೆ ನೀಡಿಲಾದ ಯಾವುದೇ ಅನುದಾನಗಳು ಮತ್ತು ಸಾಲಗಳು

**ಬ**) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದಿಂದ ಮಾಡಲಾದ ಯಾವುದೇ ಅನುದಾನಗಳು ಅಥವಾ ಸಾಲಗಳು

**ಕ**) ರಾಜ್ಯ ಸರಕಾರದಿಂದ ನಿರ್ಧರಿಸಬಹುದಾದಂಥ ಇತರೆ ಮೂಲಗಳಿಂದ ರಾಜ್ಯ ಜೈವಿಕವೈವಿಧ್ಯ ಮಂಡಳಿಯು ಸ್ವೀಕರಿಸಿದ ಎಲ್ಲಾ ಮೊತ್ತಗಳು

**(2) ರಾಜ್ಯ ಜೈವಿಕವೈವಿಧ್ಯ ನಿಧಿಯನ್ನು ಈ ಮುಂದಿನವುಗಳಿಗೆ ಎಂದರೆ,-**

**ಅ**) ಪರಂಪರೆಯ ಸ್ಥಳಗಳ ನಿರ್ವಹಣೆ ಮತ್ತು ಸಂರಕ್ಷಣೆ

**ಬ**) 37ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯ ಮೂಲಕ ಆರ್ಥಿಕವಾಗಿ ತೊಂದರೆಗೊಳಗಾದ ಯಾವುದೇ ವರ್ಗದ ವ್ಯಕ್ತಿಗಳಿಗೆ ಪರಿಹಾರ ನೀಡಲು ಅಥವಾ ಪುನರ್ವಸತಿ ಕಲ್ಪಿಸಲು

**ಕ**) ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಂವರ್ಧನೆ

**ಡ**) ಸಂಬಂಧಪಟ್ಟ ಸ್ಥಳೀಯ ನಿಕಾಯಗಳೊಂದಿಗೆ ಸಂಸ್ಥೆಗಳೊಂದಿಗೆ ಸಮಾಲೋಚಿಸಿ 24ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶಕ್ಕೆ ಒಳಪಟ್ಟು, ಯಾವ ಪ್ರದೇಶಗಳಿಂದ ಅಂತಹ ಜೈವಿಕ ಸಂಪನ್ಮೂಲಗಳು ಅಥವಾ ಅದಕ್ಕೆ ಸಂಬಂಧಪಟ್ಟ ಜ್ಞಾನ ಪ್ರಾಪ್ತವಾಗಿದೆಯೋ ಅಂಥ ಪ್ರದೇಶಗಳ ಸಾಮಾಜಿಕ-ಆರ್ಥಿಕ ಪ್ರಗತಿಗಾಗಿ

**ಗ**) ಈ ಅಧಿನಿಯಮದಿಂದ ಅಧಿಕೃತಗೊಂಡ ಉದ್ದೇಶಗಳಿಗಾಗಿ ಮಾಡಲಾದ ವೆಚ್ಚಗಳನ್ನು ಭರಿಸುವುದಕ್ಕಾಗಿ

- ಬಳಸತಕ್ಕದ್ದು.

**33. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ವಾರ್ಷಿಕ ವರದಿ:-**

ರಾಜ್ಯ ಜೈವಿಕವೈವಿಧ್ಯ ಮಂಡಳಿಯು ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ಪ್ರಪತ್ರದಲ್ಲಿ ಮತ್ತು ಅಂಥ ಸಮಯದಲ್ಲಿ ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಚಟುವಟಿಕೆಗಳ ಪೂರ್ಣ ವಿವರವನ್ನು ನೀಡುವ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರಕಾರಕ್ಕೆ ಅದರ ಪ್ರತಿಯನ್ನು ಸಲ್ಲಿಸತಕ್ಕದ್ದು.

**34. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಲೆಕ್ಕಗಳ ಲೆಕ್ಕ ಪರಿಶೋಧನೆ:-**

ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಲೆಕ್ಕಪತ್ರಗಳನ್ನು ರಾಜ್ಯದ ಮಹಾ ಲೇಖಪಾಲರೊಂದಿಗೆ ಸಮಾಲೋಚಿಸಿ ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು ಮತ್ತು ರಾಜ್ಯ ಜೈವಿಕವೈವಿಧ್ಯ ಮಂಡಳಿಯು, ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ಪ್ರತಿಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ನಿಯಮಿಸಬಹುದಾದಂಥ ದಿನಾಂಕದ ಒಳಗೆ ರಾಜ್ಯ ಸರಕಾರಕ್ಕೆ ಒದಗಿಸತಕ್ಕದ್ದು.

**35. ರಾಜ್ಯ ಜೈವಿಕವೈವಿಧ್ಯ ಮಂಡಳಿಯ ವಾರ್ಷಿಕ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು:-**

ರಾಜ್ಯ ಸರಕಾರವು, ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ – IX

## ಕೇಂದ್ರ ಮತ್ತು ರಾಜ್ಯ ಸರಕಾರಗಳ ಕರ್ತವ್ಯಗಳು

**36. ಕೇಂದ್ರ ಸರಕಾರವು, ಜೈವಿಕವೈವಿಧ್ಯದ ಸಂರಕ್ಷಣೆ ಮುಂತಾದವುಗಳಿಗಾಗಿ ರಾಷ್ಟ್ರೀಯ ಕಾರ್ಯತಂತ್ರಗಳು, ಯೋಜನೆಗಳು ಮುಂತಾದವುಗಳನ್ನು ರೂಪಿಸುವುದು:-**

(1) ಕೇಂದ್ರ ಸರಕಾರವು ಜೈವಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಪ್ರದೇಶಗಳ ಗುರುತಿಸುವಿಕೆ ಮತ್ತು ಮೇಲ್ವಿಚಾರಣೆ,ಇರುನೆಲೆ ಮತ್ತು ಹೊರನೆಲೆಯ ಸಂವರ್ಧನೆ,ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಜೈವಿಕವೈವಿಧ್ಯಕ್ಕೆ ಸಂಬಂಧಿಸಿದಂತೆ ಜಾಗೃತಿಯನ್ನು ಹೆಚ್ಚಿಸುವುದಕ್ಕೆ ಸಂಶೋಧನೆ,ತರಬೇತಿ ಮತ್ತು ಸಾರ್ವಜನಿಕ ಶಿಕ್ಷಣಗಳೂ ಸೇರಿದಂತೆ, ವೈವಿಧ್ಯ ಮತ್ತು ಸಾರ್ವಜನಿಕ ಶಿಕ್ಷಣಕ್ಕೆ ಪ್ರೋತ್ಸಾಹಕ ಕ್ರಮಗಳೂ ಸೇರಿದಂತೆ ಜೈವಿಕವೈವಿಧ್ಯ ಸಂರಕ್ಷಣೆ ಮತ್ತು ಸಂವರ್ಧನೆ ಮತ್ತು ಸುಸ್ಥಿರ ಬಳಕೆಗಾಗಿ ರಾಷ್ಟ್ರೀಯ ಕಾರ್ಯತಂತ್ರಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು.

(2) ಕೇಂದ್ರ ಸರಕಾರವು, ಜೈವಿಕವೈವಿಧ್ಯಗಳು, ಜೈವಿಕ ಸಂಪನ್ಮೂಲಗಳು ಮತ್ತು ಅವುಗಳ ಆವಾಸಗಳಿಂದ ಸಮೃದ್ಧವಾಗಿರುವ ಯಾವುದೇ ಪ್ರದೇಶವು, ಅತಿ ಬಳಕೆ, ದುರ್ಬಳಕೆ ಅಥವಾ ನಿರ್ಲಕ್ಷದಿಂದಾಗಿ ಅವನತಿ ಹೊಂದುತ್ತಿವೆ ಎಂದು ಮನಗಂಡಲ್ಲಿ, ಅದು, ಅಂಥ ರಾಜ್ಯ ಸರಕಾರಕ್ಕೆ ಒದಗಿಸಲು ಸಾಧ್ಯವಿರುವಂಥ ಅಥವಾ ಅಗತ್ಯವಿರುವಂಥ ಯಾವುದೇ ತಾಂತ್ರಿಕ ಮತ್ತು ಇತರೆ ನೆರವನ್ನು ನೀಡಿ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ತ್ವರಿತ ಸುಧಾರಣಾ ಕ್ರಮಗಳನ್ನು ಕೈಗೊಳುವಂತೆ ನಿರ್ದೇಶನಗಳನ್ನು ಹೊರಡಿಸತಕ್ಕದ್ದು.

(3) ಕೇಂದ್ರ ಸರಕಾರವು, ಕಾರ್ಯಸಾಧ್ಯವಾಗುವ ಮಟ್ಟಿಗೆ ಸೂಕ್ತವೆಂದು ಭಾವಿಸಿದಲ್ಲೆಲ್ಲ ಜೈವಿಕವೈವಿಧ್ಯದ ಸಂರಕ್ಷಣೆ, ಸಂವರ್ಧನೆ ಮತ್ತು ಸುಸ್ಥಿರ ಬಳಕೆಯನ್ನು ಸಂಬಂಧಿತ ವಲಯ ಅಥವಾ ಅಂತರ ವಲಯ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಕಾರ್ಯನೀತಿಗಳೊಂದಿಗೆ ಸಂಯೋಜಿಸತಕ್ಕದ್ದು.

**(4) ಕೇಂದ್ರ ಸರಕಾರವು, ತೆಗೆದುಕೊಳ್ಳತಕ್ಕ ಕ್ರಮಗಳು:**

**ಅ)** ಅಗತ್ಯವಿರುವೆಡೆಗಳಲ್ಲಿ,ಜೈವಿಕವೈವಿಧ್ಯದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಸಂಭವವಿರುವ ಯೋಜನೆಯ ಪರಿಸರಾತ್ಮಕ ಪ್ರಭಾವದ ನಿರ್ಧರಣೆಗಾಗಿ, ಅಂಥ ಪರಿಣಾಗಳನ್ನು ತಪ್ಪಿಸುವ ಅಥವಾ ಕಡಿಮೆ ಮಾಡುವ ದೃಷ್ಟಿಯಿಂದ ಮತ್ತು ಅಂಥ ನಿರ್ಧರಣೆಯಲ್ಲಿ ಸಾರ್ವಜನಿಕ ಸಹಭಾಗಿತ್ವಕ್ಕಾಗಿ ಸೂಕ್ತ ಅವಕಾಶ ಕಲ್ಪಿಸಲು.

**ಬ)** ಜೈವಿಕವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಮತ್ತು ಮಾನವನ ಆರೋಗ್ಯದ ಮೇಲೆ ಪ್ರತಿಕೋಲ ಪರಿಣಾಮವನ್ನುಂಟು ಮಾಡುವ ಸಂಭವವಿರುವ ಜೈವಿಕ ತಂತ್ರಜ್ಞಾನದ ಬಳಕೆಯಿಂದ ಜೀವಂತ ಪರಿವರ್ತಿತ ಜೀವಿಗಳ ಬಳಕೆ ಮತ್ತು ಬಿಡುಗಡೆಯಿಂದಗಾಗುವ ಅಪಾಯಗಳನ್ನು ತಡೆಯುವುದಕ್ಕೆ, ನಿರ್ವಹಿಸುವುದಕ್ಕೆ ಅಥವಾ ನಿಯಂತ್ರಿಸು ವುದಕ್ಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**(5)** ಕೇಂದ್ರ ಸರಕಾರವು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಶಿಫಾರಸ್ಸು ಮಾಡಿದಂತೆ ಸ್ಥಳೀಯ, ರಾಜ್ಯ ಅಥವಾ ರಾಷ್ಟ್ರಮಟ್ಟಗಳಲ್ಲಿ ಅಂತಹ ಜ್ಞಾನವನ್ನು ನೋಂದಾಯಿಸುವುದನ್ನು ಒಳಗೊಂಡಂತೆ ಅಂಥ ಕ್ರಮಗಳ ಮೂಲಕ ಮತ್ತು ತಂತ್ರಾನೇ ಹುಟ್ಟುವ ವ್ಯವಸ್ಥೆಯನ್ನು ಒಳಗೊಂಡಂತೆ ಸಂರಕ್ಷಣೆಗೆ ಸಂಬಂಧಿಸಿದ ಇತರೆ ಕ್ರಮಗಳ ಮೂಲಕ ಜೈವಿಕವೈವಿಧ್ಯಕ್ಕೆ ಸಂಬಂಧಿಸಿದ್ದ ಸ್ಥಳೀಯ ಜನರ ಜ್ಞಾನವನ್ನು ಗೌರವಿಸುವುದಕ್ಕೆ ಮತ್ತು ಸಂರಕ್ಷಿಸುವುದಕ್ಕೆ ಪ್ರಯತ್ನಿಸತಕ್ಕದ್ದು.

**ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ:**

**ಅ) "ಹೊರ ನೆಲೆ ಸಂರಕ್ಷಣೆ"** ಎಂದರೆ, ಜೈವಿಕ ವೈವಿಧ್ಯದ ಘಟಕಗಳನ್ನು ಅವುಗಳ ಸ್ವಾಭಾವಿಕ ಆವಾಸಗ ಳಿಂದ ಹೊರಗೆ ಸಂರಕ್ಷಿಸುವುದು

**ಬ) "ಇರು ನೆಲೆ ಸಂರಕ್ಷಣೆ"** ಎಂದರೆ, ಪರಿಸರ ವ್ಯವಸ್ಥೆ ಮತ್ತು ಸ್ವಾಭಾವಿಕ ಆವಾಸಗಳ ಸಂರಕ್ಷಣೆ ಮತ್ತು ಬದುಕಬಲ್ಲ ವಿಶಿಷ್ಟ ಪ್ರಭೇದಗಳನ್ನು ಅವುಗಳ ಸ್ವಾಭಾವಿಕ ಸನ್ನಿವೇಶಗಳಲ್ಲಿ ನಿರ್ವಹಿಸುವುದು ಮತ್ತು ಪುನಶ್ಚೇತನ(ಸಂಗ ್ರಹಣೆ) ಹಾಗೂ ಬೆಳೆಸಿದ ಮತ್ತು ಕೃಷಿ ಮಾಡಿದ ಪ್ರಭೇದಗಳ ಸಂಬಂಧದಲ್ಲಿ, ಎಲ್ಲಿ ಅವುಗಳ ವಿಶಿಷ್ಟ ವರ್ಗಗ ಳನ್ನು ವಿಕಸನಗೊಳಿಸಲಾಗಿದೆಯೋ ಆ ಸನ್ನಿವೇಶಗಳಲ್ಲಿನ ಸಂರಕ್ಷಣೆ ಎಂದರ್ಥ.

**"ಇರು ನೆಲೆ ಸಂರಕ್ಷಣೆ"** ಎಂದರೆ, ಜೀವಾವಾಸ ಮತ್ತು ಆವಾಸಗಳ ಸಂರಕ್ಷಣೆ ಮತ್ತು ಬದುಕಬಲ್ಲ ಒಟ್ಟು ಪ್ರಭೇದಗ ಳನ್ನು ಅವುಗಳ ಸ್ವಾಭಾವಿಕ ಪರಿಸರದಲ್ಲಿ ಮತ್ತು ನಾಡಿನ ಪರಿಸರಕ್ಕೆ ಹೊಂದಿಸಿದ ಅಥವಾ ಕೃಷಿ ಮಾಡಿದ ಪ್ರಭೇದಗಳ ಸಂದರ್ಭದಲ್ಲಿ, ಅವು ತಮ್ಮ ವಿಶಿಷ್ಟ ಗುಣಲಕ್ಷಣಗಳನ್ನು ಅಭಿವೃದ್ಧಿಪಡಿಸಿಕೊಂಡ ಪರಿಸರಗಳಲ್ಲಿ ನಿರ್ವಹಿಸುವುದು ಮತ್ತು ಸಂಗ್ರಹಿಸುವುದು,

- ಎಂದರ್ಥ

**37. ಜೈವಿಕವೈವಿಧ್ಯದ ಪರಂಪರಾಗತ ತಾಣಗಳು:-**

(1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಬಾಧಕವಾಗದಂತೆ ರಾಜ್ಯ ಸರಕಾರವು, ಕಾಲದಿಂದ ಕಾಲಕ್ಕೆ ಸ್ಥಳೀಯ ನಿಕಾಯಗಳೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಅಡಿಯಲ್ಲಿ ಜೈವಿಕವೈವಿಧ್ಯದ ಪ್ರಾಮುಖ್ಯತೆ ಹೊಂದಿರುವ ಪ್ರದೇಶಗಳನ್ನು ಜೈವಿಕವೈವಿಧ್ಯದ ಪರಂಪರಾಗತ ತಾಣಗಳೆಂದು ರಾಜ್ಯ ಪತ್ರದಲ್ಲಿ ಅಧಿಸೂಚಿಸಬಹುದು.

(2) ರಾಜ್ಯ ಸರಕಾರವು, ಕೇಂದ್ರ ಸರಕಾರದೊಂದಿಗೆ ಸಮಾಲೋಚಿಸಿ, ಎಲ್ಲಾ ಪರಂಪರಾಗತ ತಾಣಗಳ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ನಿಯಮಗಳನ್ನು ರೂಪಿಬಹುದು.

(3) ರಾಜ್ಯ ಸರಕಾರವು, ಅಂಥ ಅಧಿಸೂಚನೆಯಿಂದ ಆರ್ಥಿಕವಾಗಿ ಬಾಧಿತನಾದ ಯಾರೇ ವ್ಯಕ್ತಿ ಅಥವಾ ಸಮುದಾಯಗಳಿಗೆ ಪರಿಹಾರ ನೀಡುವ ಅಥವಾ ಪುನರ್ವಸತಿ ಕಲ್ಪಿಸುವ ಯೋಜನೆಗಳನ್ನು ರೂಪಿಸತಕ್ಕದ್ದು.

**38.ಅಪಾಯದ ಅಂಚಿನಲ್ಲಿರುವ ಪ್ರಭೇದಗಳನ್ನು ಅಧಿಸೂಚಿಸಲು ಕೇಂದ್ರ ಸರ್ಕಾರದ ಅಧಿಕಾರ:-**

ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಕೇಂದ್ರ ಸರಕಾರವು ಸಂಬಂಧಪಟ್ಟ ರಾಜ್ಯ ಸರಕಾರದೊಂದಿಗೆ ಸಮಾಲೋಚಿಸಿ ಕಾಲದಿಂದಕಾಲಕ್ಕೆ ವಿನಾಶದ ಅಂಚಿನಲ್ಲಿರುವ ಅಥವಾ ಸದ್ಯದಲ್ಲಿಯೇ ನಾಶವಾಗುವ ಸಂಭವವಿರುವ ಯಾವುವೇ ಪ್ರಭೇದಗಳನ್ನು ಅಪಾಯದ ಅಂಚಿನಲ್ಲಿರುವ ಪ್ರಭೇದಗಳೆಂದು ಅಧಿಸೂಚಿಸಬಹುದು ಮತ್ತು ಉದ್ದೇಶಕ್ಕಾಗಿ ಅವುಗಳ ಸಂಗ್ರಹಣೆಯನ್ನು ನಿಷೇಧಿಸಬಹುದು ಅಥವಾ ನಿಯಂತ್ರಿಸಬಹುದು ಹಾಗೂ ಅವುಗಳ ಪ್ರಭೇದಗಳ ಪುನರ್ವಸತಿ ಮತ್ತು ಸಂರಕ್ಷಣೆಗೆ ಸೂಕ್ತಕ್ರಮಗಳನ್ನು ಕೈಗೊಳ್ಳಬಹುದು.

**39. ಸಂಗ್ರಹಾಲಯಗಳನ್ನು ಹೆಸರಿಸಲು ಕೇಂದ್ರ ಸರ್ಕಾರದ ಅಧಿಕಾರ:-**

(1) ಕೇಂದ್ರ ಸರಕಾರವು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ವಿವಿಧ ವರ್ಗಗಳ ಜೈವಿಕ ಸಂಪನ್ಮೂಲಗಳಿಗೆ ಆ ಅಧಿನಿಯಮದ ಅಡಿಯಲ್ಲಿ ಸಂಸ್ಥೆಗಳನ್ನು ಸಂಗ್ರಹಾಲಯಗಳೆಂದು ಹೆಸರಿಸಬಹುದು.

(2) ಅದರಲ್ಲಿ ಇಡಲಾದ ಮೂಲ ಮಾದರಿಗಳು ಸೇರಿದಂತೆ ಜೈವಿಕ ಸಾಮಗ್ರಿಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(3) ಯಾವುದೇ ವ್ಯಕ್ತಿಯಿಂದ ಆವಿಷ್ಕಾರಗೊಂಡ ಯಾವುದೇ ಹೊಸ ಪ್ರಭೇದವನ್ನು ಈ ಉದ್ದೇಶಕ್ಕಾಗಿ ನೀಮಿಸಲಾದ ಸಂಗ್ರಹಾಲಯಗಳಿಗೆ ಅಥವಾ ಯಾವುದೇ ಸಂಸ್ಥೆಗಳಿಗೆ ತಿಳಿಸತಕ್ಕದ್ದು ಮತ್ತು ಅವನು ಮೂಲ ಪ್ರಭೇದಗ ಳನ್ನು ಅಂಥ ಸಂಗ್ರಹಾಲಯ ಅಥವಾ ಸಂಸ್ಥೆಯ ಗಳಲ್ಲಿ ಇಡತಕ್ಕದ್ದು.

**40. ಕೆಲವು ಜೈವಿಕ ಸಂಪನ್ಮೂಲಗಲೆಗೆ ವಿನಾಯಿತಿ ನೀಡಲು ಕೇಂದ್ರ ಸರ್ಕಾರದ ಅಧಿಕಾರ:-**

ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರಕಾರವು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸುವುದರ ಮೂಲಕ, ಸಾಮಾನ್ಯವಾಗಿ ವಾಣಿಜ್ಯ ಸರಕುಗಳಾಗಿರುವ ಜೈವಿಕ ಸಂಪನ್ಮೂಲಗಳು ಸೇರಿದಂತೆ ಯಾವುವೇ ವಸ್ತುಗಳಿಗೆ ಈ ಅಧಿನಿಯಮದ ಉಪಬಂಧಗಳು ಅನ್ವಯಿಸತಕ್ಕದ್ದು ಎಂದು ಘೋಷಿಸಬಹುದು.

## ಅಧ್ಯಾಯ–X

## ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗಳು

**41. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ರಚನೆ:-**

(1) ಪ್ರತಿಯೊಂದು ಸ್ಥಳೀಯ ನಿಕಾಯವು ತನ್ನ ಪ್ರದೇಶದಲ್ಲಿ, ಆವಾಸಗಳ ಸಂರಕ್ಷಣೆ, ಭೂ ಸಂತತಿಗಳ ಸಂರಕ್ಷಣೆ, ನಾಟಿ ತಳಿ ಪ್ರಭೇದಗಳು ಮತ್ತು ಕೃಷಿ ತಳಿಗಳು, ಪಳಗಿಸಿದ ಪ್ರಾಣಿಗಳು ಅವುಗಳ ತಳಿಗಳು, ಹಾಗೂ ಸೂಕ್ಷ್ಮ ಜೀವಿಗಳು ಮತ್ತು ಜೈವಿಕವೈವಿಧ್ಯಕ್ಕೆ ಸಂಬಂಧಿಸಿದ ಅವುಗಳ ಕಾಲಾನುಕ್ರಮದ ಪರಿಚಯವು ಸೇರಿದಂತೆ ಜೈವಿಕವೈವಿಧ್ಯದ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ದಾಖಲಾತಿಯ ಉದ್ದೇಶಕ್ಕಾಗಿ ತನ್ನ ಪ್ರದೇಶದಲ್ಲಿ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯನ್ನು ರಚಿಸತಕ್ಕದ್ದು.

**ವಿವರಣೆ:- ಈ ಉಪ ಪ್ರಕರಣದ ಉದ್ದೇಶಗಳಿಗಾಗಿ:-**

**ಅ)** **'ಕೃಷಿ ತಳಿ'** ಎಂದರೆ ಕೃಷಿ ಉದ್ದೇಶಕ್ಕಾಗಿಬೇಸಾಯದ ಮೂಲಕ ಬೆಳೆದಿದ್ದು, ಉಳಿದುಕೊಂಡು ಬಂದ ಅಥವಾ ಬೇಸಾಯದ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ಅಭಿವೃದ್ಧಿಪಡಿಸಿದ ತಳಿಯ ಸಸ್ಯ ಪ್ರಭೇದ

**ಬ)** 'ನಾಟಿ ತಳಿ ಪ್ರಭೇದ' ಎಂದರೆ ರೈತರು ಅಭಿವೃದ್ಧಿಪಡಿಸಿದ, ಬೆಳೆಸಿದ ಮತ್ತು ಅವರ ನಡುವೆ ಅನೌಪಚಾರಿಕವಾಗಿ ವಿನಿಮಯ ಮಾಡಿಕೊಳ್ಳಲಾದ ಸಸ್ಯ ಪ್ರಭೇದ

**ಕ)** **'ವನ್ಯ ತಳಿ'** ಎಂದರೆ ಪ್ರಾಚೀನ ಕಾಲದ ರೈತರು ಹಾಗೂ ಅವರ ಉತ್ತರಾಧಿಕಾರಿಗಳು ಬೆಳೆಯುತ್ತಿದ್ದ ಪುರಾತನಕಾಲದ ಕೃಷಿ ತಳಿ

(2) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಮತ್ತು ರಾಜ್ಯ ಜೈವಿಕವೈವಿಧ್ಯ ಮಂಡಳಿಗಳು, ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ಎಲ್ಲೆಯ ವ್ಯಾಪ್ತಿಯೊಳಗೆ ದೊರೆಯುವಂಥ ಜೈವಿಕ ಸಂಪನ್ಮೂಲಗಳ ಹಾಗೂ ಅಂಥ ಸಂಪನ್ಮೂಲಗಳಿಗೆ ಸಂಬಂಧಪಟ್ಟ ಯಾವುದೇ ಜ್ಞಾನದ ಬಳಕೆಗೆ ಸಂಬಂಧಪಟ್ಟ ಯಾವುದೇ ನಿರ್ಣಯವನ್ನು ಕೈಗೊಳ್ಳುವಾಗ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗ ಳೊಂದಿಗೆ ಸಮಾಲೋಚಿಸತಕ್ಕದು.

(3) ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯು, ತನ್ನ ಕೇಂದ್ರಾಡಳಿತದ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ, ವಾಣಿಜ್ಯ ಉದ್ದೇಶಗಳಿಗಾಗಿ, ಯಾವುದೇ ಜೈವಿಕ ಸಂಪನ್ಮೂಲವನ್ನು ಪಡೆಯುವುದಕ್ಕಾಗಿ ಅಥವಾ ಸಂಗ್ರ ಹಿಸುವುದಕ್ಕಾಗಿ ಯಾರೇ ವ್ಯಕ್ತಿಯಿಂದ ಶುಲ್ಕರೂಪವಾಗಿ ವೆಚ್ಚಗಳನ್ನು ವಿಧಿಸಬಹುದು.

## ಅಧ್ಯಾಯ–XI
## ಸ್ಥಳೀಯ ಜೈವಿಕವೈವಿಧ್ಯ ನಿಧಿ

**42. ಸ್ಥಳೀಯ ಜೈವಿಕವೈವಿಧ್ಯ ನಿಧಿಗೆ ಅನುದಾನಗಳು:–**

ರಾಜ್ಯ ಸರಕಾರವು, ಈ ಬಗ್ಗೆ ಇರುವ ಕಾನೂನಿನ ಮೂಲಕ ರಾಜ್ಯ ವಿಧಾನ ಮಂಡಲದಿಂದ ಮಾಡಲಾದ ಯುಕ್ತ ವಿನಿಯೋಗ ದ ತರುವಾಯ ಈ ಅಧಿನಿಯಮದ ಉದ್ದೇಶಗಳಿಗಾಗಿ,ಉಪಯೋಗಿಸಿಕೊಳ್ಳಲು ಸೂಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತವನ್ನು ಅನುದಾನಗಳು ಅಥವಾ ಸಾಲಗಳ ರೂಪದಲ್ಲಿ ಸ್ಥಳೀಯ ಜೈವಿಕವೈವಿಧ್ಯ ನಿಧಿಗಳಿಗೆ ಸಂದಾಯ ಮಾಡಬಹುದು.

**43. ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಸ್ಥಾಪನೆ:-**

1. ರಾಜ್ಯ ಸರಕಾರವು, ಸ್ವಯಂ ಆಡಳಿತದ ಯಾವುದೇ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿರುವ ಅಧಿಸೂಚಿಸಲಾದ ಪ್ರತಿಯೊಂದು ಪ್ರದೇಶದಲ್ಲಿ, ಸ್ಥಳೀಯ ಜೈವಿಕವೈವಿಧ್ಯ ನಿಧಿಯೆಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

**ಅ)** 42ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಯಾವುವೇ ಅನುದಾನಗಳು ಅಥವಾ ಸಾಲಗಳು

**ಬ)** ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ನೀಡಿದ ಯಾವುವೇ ಅನುದಾನಗಳು ಅಥವಾ ಸಾಲಗ ಳು

**ಕ)** ರಾಜ್ಯ ಜೈವಿಕವೈವಿಧ್ಯ ಮಂಡಳಿಗಳು ನೀಡಿದ ಯಾವುವೇ ಅನುದಾನಗಳು ಮತ್ತು ಸಾಲಗಳು

**ಡ)** 41ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ, ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳು ಸ್ವೀಕರಿಸಿದ ಶುಲ್ಕಗಳು

**ಇ)** ರಾಜ್ಯ ಸರಕಾರವು ನಿರ್ಧರಿಸಬಹುದಾದಂಥ ಇತರ ಸಂಪನ್ಮೂಲಗಳಿಂದ, ಸ್ಥಳೀಯ ಜೈವಿಕವೈವಿಧ್ಯ ನಿಧಿಯು ಸ್ವೀಕರಿಸಲಾದ ಎಲ್ಲಾ ಮೊತ್ತಗಳು

- ಜಮೆಯಾಗತಕ್ಕದು.

**44. ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಬಳಕೆ:-**

(1) (2)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ಸ್ಥಳೀಯ ಜೈವಿಕವೈವಿಧ್ಯ ನಿಧಿಯ ವ್ಯವಸ್ಥಾಪನೆ ಮತ್ತು ಅಂಥ ನಿಧಿಯನ್ನು ಬಳಸತಕ್ಕ ಉದ್ದೇಶಗಳು ರಾಜ್ಯ ಸರಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕುದು.

(2) ನಿಧಿಯನ್ನು,ಸಂಬಂಧಪಟ್ಟ ಸ್ಥಳೀಯ ನಿಕಾಯದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ ಜೈವಿಕವೈವಿಧ್ಯದ ಸಂರಕ್ಷಣೆ ಮತ್ತು ವೃದ್ಧಿಗೆ ಬಳಸತಕ್ಕುದು ಮತ್ತು ಅಂಥ ಬಳಕೆಯು ಜೈವಿಕವೈವಿಧ್ಯದ ಸಂರಕ್ಷಣೆಗೆ ಸುಸಂಗತವಾಗುವಷ್ಟರ ಮಟ್ಟಿಗೆ ಸಮುದಾಯದ ಪ್ರಯೋಜನಕ್ಕಾಗಿ ನಿಧಿಯನ್ನು ಬಳಸತಕ್ಕುದು.

**45. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳ ವಾರ್ಷಿಕ ವರದಿ:-**

ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಅಭಿರಕ್ಷೆ ಹೊಂದಿರುವ ವ್ಯಕ್ತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ವಿವರವನ್ನು ನೀಡುವ ತನ್ನ ವಾರ್ಷಿಕ ವರದಿಯನ್ನು ಪ್ರತಿ ಹಣಕಾಸು ವರ್ಷದ ಸಮಯದಲ್ಲಿ ಸಿದ್ಧಗೊಳಿಸತಕ್ಕುದು ಮತ್ತು ಅದರ ಒಂದು ಪ್ರತಿಯನ್ನು ಸ್ಥಳೀಯ ಸಭೆಗೆ ಒಪ್ಪಿಸತಕ್ಕದ್ದು.

**46. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಗಳ ಲೆಕ್ಕ ಪರಿಶೋಧನೆ:-**

ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಲೆಕ್ಕಗಳನ್ನು, ರಾಜ್ಯದ ಮಹಾಲೇಖಪಾಲರೊಂದಿಗೆ ಸಮಾಲೋಚಿಸಿ,ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಪರಿಶೋಧನೆ ಮಾಡತಕ್ಕುದು ಮತ್ತು ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಅಭಿರಕ್ಷೆ ಹೊಂದಿರುವ ವ್ಯಕ್ತಿಯು, ಅದರ ಲೆಕ್ಕಗಳನ್ನು ಪರಿಶೋಧನೆಯ ಪ್ರತಿಯನ್ನು ಅದರ ಮೇಲೆ ಮಾಡಿದ ಲೆಕ್ಕ ಪರಿಶೋಧನ ವರದಿಯ ಜೊತೆಯಲ್ಲಿ ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು, ಸಂಬಂಧ ಪಟ್ಟ ಸ್ಥಳೀಯ ನಿಕಾಯಕ್ಕೆ ಒದಗಿಸತಕ್ಕುದ್ದು.

**47. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ವಾರ್ಷಿಕ ವರದಿ ಮುಂತಾದವುಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸುವುದು:-**

41ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯನ್ನು ಸ್ಥಾಪನೆ ಮಾಡಿರುವ ಪ್ರತಿಯೊಂದು ಸ್ಥಳೀಯ ನಿಕಾಯುವು, ಅನುಕ್ರಮವಾಗಿ 45 ಮತ್ತು 46ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಪರಿಶೋಧನೆ ಮಾಡಲಾದ ಲೆಕ್ಕಗಳ ಪ್ರತಿಯನ್ನು ಮತ್ತು ಅಂಥ ಸಮಿತಿಗೆ ಸಂಬಂಧಿಸಿದಂತೆ ಪರಿಶೋಧಕನು ಅದರಲ್ಲಿ ಮಾಡಿದ ವರದಿಯೊಂದಿಗೆ ಸ್ಥಳೀಯ ನಿಕಾಯದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಮ್ಯಾಜಿಸ್ಟ್ರೇಟರಿಗ ೆ ಸಲ್ಲಿಸಲು ಕಾರಣವಾಗತಕ್ಕದ್ದು.

## ಅಧ್ಯಾಯ–XII

## ಸಂಕೀರ್ಣ

**48. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಕೇಂದ್ರ ಸರಕಾರವು ನೀಡುವ ನಿರ್ದೇಶನಗಳಿಗೆ ಬದ್ಧವಾಗಿರತಕ್ಕುದು:-**

(1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿನ ಅದರ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ನಿರ್ವಹಣೆಯಲ್ಲಿ, ಕೇಂದ್ರ ಸರಕಾರವು ಕಾಲಕಾಲಕ್ಕೆ ಕಾರ್ಯನೀತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಲಿಖಿತದಲ್ಲಿ ನೀಡಬಹುದಾದಂತಹ ನಿರ್ದೇಶನಗ ಳಿಗೆ ಬದ್ಧವಾಗಿರತಕ್ಕದ್ದು.

ಪರಂತು, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ, ಈ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ನಿರ್ದೇಶನ ನೀಡುವ ಮೊದಲು ಅದರ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಕಾರ್ಯಸಾಧ್ಯವಾದಷ್ಟರ ಮಟ್ಟಿಗೆ ಅವಕಾಶ ಚವನ್ನು ಕೊಡತಕ್ಕದ್ದು.

(2) ಪ್ರಶ್ನೆಯು ಕಾರ್ಯನೀತಿಯ ಬಗ್ಗೆಯೇ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರಕಾರದ ನಿರ್ಣಯವೇ ಅಂತಿಮವಾಗಿ ರತಕ್ಕದ್ದು.

**49. ನಿರ್ದೇಶನಗಳನ್ನು ಕೊಡುವುದಕ್ಕೆ ರಾಜ್ಯ ಸರಕಾರದ ಅಧಿಕಾರ:-**

**(1)** ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ರಾಜ್ಯ ಜೈವಿಕವೈವಿಧ್ಯ ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿನ ಅದರ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ನಿರ್ವಹಣೆಯಲ್ಲಿ, ರಾಜ್ಯ ಸರಕಾರವು ಕಾಲಕಾಲಕ್ಕೆ ಕಾರ್ಯನೀತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಲಿಖಿತದಲ್ಲಿ ನೀಡಬಹುದಾದಂತಹ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು.

ಪರಂತು, ರಾಜ್ಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ, ಈ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ನಿರ್ದೇಶನ ನೀಡುವ ಮೊದಲು ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ಅವಕಾಶವನ್ನು ಕೊಡತಕ್ಕದ್ದು.

**(2)** ಪ್ರಶ್ನೆಯು ಕಾರ್ಯನೀತಿಯ ಬಗ್ಗೆಯೇ ಅಲ್ಲವೇ ಎಂಬ ಬಗ್ಗೆ ರಾಜ್ಯ ಸರಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**50. ರಾಜ್ಯ ಜೈವಿಕವೈವಿಧ್ಯ ಮಂಡಳಿಗಳ ನಡುವಿನ ವಿವಾದಗಳನ್ನು ಇತ್ಯರ್ಥಗೊಳಿಸುವುದು:-**

(1) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ನಡುವೆ ವಿವಾದ ಉಂಟಾದಲ್ಲಿ ಸಂದರ್ಭಾನುಸಾರ, ಸದರಿ ಪ್ರಾಧಿಕಾರ ಅಥವಾ ಮಂಡಳಿಯು, ಕೇಂದ್ರ ಸರಕಾರಕ್ಕೆ ನಿಯಮಿಸಲಾದ ಸಮಯದೊಳಗೆ ಅಪೀಲು ಸಲ್ಲಿಸಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಪೀಲು, ಕೇಂದ್ರ ಸರಕಾರವು ನಿಯಮಿಸಬಹುದಾದಂತಹ ನಮೂನೆಯಲ್ಲಿ ಇರತಕ್ಕದ್ದು.

(3) **ಅಪೀಲನ್ನು** ಇತ್ಯರ್ಥಗೊಳಿಸುವ ಪ್ರಕ್ರಿಯೆ ಕೇಂದ್ರ ಸರಕಾರವು ನಿಯಮಿಸಬಹುದಾದಂತಹ ನಮೂನೆಯಲ್ಲಿ ಇರತಕ್ಕದ್ದು.

ಪರಂತು, ಅಪೀಲುಗಳನ್ನು ಇತ್ಯರ್ಥಗೊಳಿಸುವ ಮೊದಲು, ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(4) ರಾಜ್ಯ ಜೈವಿಕವೈವಿಧ್ಯ ಮಂಡಳಿಗಳ ನಡುವೆ ವಿವಾದ ಉಂಟಾದಲ್ಲಿ ಅದನ್ನು ಕೇಂದ್ರ ಸರಕಾರವು ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(5) (4)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ನ್ಯಾಯ ನಿರ್ಣಯ ಮಾಡುವಾಗ, ಸಹಜ ನ್ಯಾಯದ ತತ್ವಗಳಿಗೆ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಕೇಂದ್ರ ಸರಕಾರವು ನಿಯಮಿಸಬಹುದಾದಂತಹ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(6) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯಗಳಲ್ಲಿ ನಿಹಿತವಾದ ಅಧಿಕಾರಗಳನ್ನು ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು, ಎಂದರೆ,-

ಎ) ಯಾರೇ ವ್ಯಕ್ತಿಯನ್ನು ಹಾಜರಾಗುವಂತೆ ಸಮನು ಮಾಡುವುದು ಮತ್ತು ಒತ್ತಾಯಿಸುವುದು ಮತ್ತು ಆತನನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವುದು.

ಬಿ) ದಸ್ತಾವೇಜುಗಳನ್ನು ಪತ್ತೆ ಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು

ಸಿ) ಶಪಥ ಪತ್ರದ ಮೇಲೆ ಸಾಕ್ಷ್ಯ ಸ್ವೀಕರಿಸುವುದು

**ಡಿ)** ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್ನುಗಳನ್ನು ಹೊರಡಿಸಲು

**ಇ)** ತನ್ನ ನಿರ್ಣಯಗಳನ್ನು ಪುನರ್ ವಿಮರ್ಶಿಸುವುದು; ದೋಷಪೂರಿತ ಅರ್ಜಿಯನ್ನು ತಿರಸ್ಕರಿಸುವುದು ಅಥವಾ ಏಕ ಪಕ್ಷೀಯವಾಗಿ ನಿರ್ಣಯಿಸುವುದು

**ಎಫ್)** ದೋಷಯುಕ್ತವೆಂದು ಯಾವುದೇ ಅರ್ಜಿಯ ವಜಾ ಆದೇಶವನ್ನು ಅಥವಾ ಏಕ ಪಕ್ಷೀಯವಾಗಿ ಅದು ಹೊರಡಿಸಿದ ಆದೇಶವನ್ನು ರದ್ದುಪಡಿಸುವುದು.

**ಜಿ)** ನಿಯಮಿಸಬಹುದಾದ ಇತರ ಯಾವುದೇ ವಿಷಯ.

7. ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಪ್ರತಿಯೊಂದು ವ್ಯವಹರಣೆಯು ಭಾರತ ದಂಡ ಸಂಹಿತೆಯ 193ನೇ ಪ್ರಕರಣ ಮತ್ತು 228ರ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಮತ್ತು 196ರ ಪ್ರಕರಣದ ಉದ್ದೇಶಗಳಿಗೆ ನ್ಯಾಯಿಕ ವ್ಯವಹರಣೆ ಎಂದು ಭಾವಿಸತಕ್ಕದ್ದು. ಭಾರತ ದಂಡ ಪ್ರಕ್ರಿಯಾ ಸಂಹಿತೆಯ 195ನೇ ಪ್ರಕರಣ ಮತ್ತು ಅಧ್ಯಾಯ XXVIರ ಎಲ್ಲ ಉದ್ದೇಶಗಳಿಗೆ ರಾಷ್ಟ್ರೀಯ ಜೀವ ವೈವಿಧ್ಯ ಪ್ರಾಧಿಕಾರವನ್ನು ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**51.ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಮತ್ತು ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಸದಸ್ಯರು, ಅಧಿಕಾರಿಗಳು, ಮುಂತಾದವರನ್ನು ಸರಕಾರಿ ನೌಕರರೆಂದು ಭಾವಿಸುವುದು:-**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಎಲ್ಲಾ ಸದಸ್ಯರನ್ನು, ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅನುಸರಿಸಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿದ್ದಾರೆಂದು ತಾತ್ಪರ್ಯವಾಗುತ್ತಿರುವಾಗ ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಸರಕಾರಿ ನೌಕರರೆಂದು ಭಾವಿಸತಕ್ಕದ್ದು.

**52. ಅಪೀಲು:-**

ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಲಾಭದ ಹಂಚಿಕೆಯ ನಿರ್ಧಾರ ಅಥವಾ ಆದೇಶದಿಂದ ಬಾಧಿತನಾದಲ್ಲಿ, ಸಂದರ್ಭಾನುಸಾರ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಅಂಥ ನಿರ್ಧಾರ ಅಥವಾ ಆದೇಶವು ಅವನಿಗೆ ತಿಳಿಸಲಾದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಉಚ್ಚ ನ್ಯಾಯಾಲಯದಲ್ಲಿ ಅವನು ಅಪೀಲು ಸಲ್ಲಿಸಬಹುದು.

ಪರಂತು, ಉಚ್ಚ ನ್ಯಾಯಾಲಯವು, ಸದರಿ ಅವಧಿಯೊಳಗಾಗಿ ಸಾಕಷ್ಟು ಕಾರಣಗಳಿಂದ ಅಪೀಲು ಸಲ್ಲಿಸಲು ಪ್ರತಿಬಂಧಿತನಾಗಿದ್ದನೆಂದು ಖಚಿತಪಟ್ಟಲ್ಲಿ, ಅರವತ್ತು ದಿವಸಗಳಿಗೆ ಮೀರದ ಹೆಚ್ಚಿನ ಅವಧಿಯೊಳಗಾಗಿ ಅಪೀಲು ಸಲ್ಲಿಸುವುದಕ್ಕೆ ಅನುಮತಿ ನೀಡಬಹುದು.

**53.ನಿರ್ಧಾರ ಅಥವಾ ಆದೇಶದ ಜಾರಿ:-**

ಈ ಅಧಿನಿಯಮದ ಅಡಿಯಲ್ಲಿ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯದ ಜೈವಿಕವೈವಿಧ್ಯ ಮಂಡಳಿ ಮಾಡಿದ ಲಾಭದ ಹಂಚಿಕೆಯ ಪ್ರತಿಯೊಂದು ನಿರ್ಧಾರ ಅಥವಾ ಆದೇಶವನ್ನು ಅಥವಾ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿ ಯಾವುದೇ ನಿರ್ಧಾರ ಅಥವಾ ಆದೇಶದ ವಿರುದ್ಧ ಯಾವುದೇ ಅಪೀಲಿನಲ್ಲಿ ಉಚ್ಚ ನ್ಯಾಯಾಲಯವು ಮಾಡಿದ ಆದೇಶವನ್ನು, ಸಂದರ್ಭಾನುಸಾರ,ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಯಾರೇ ಅಧಿಕಾರಿ ಅಥವಾ ಉಚ್ಚನ್ಯಾಯಾಲಯದ ರಿಜಿಸ್ಟ್ರಾರನು ನೀಡಿದ ಪ್ರಮಾಣ ಪತ್ರದ ಮೇರೆಗೆ ಸಿವಿಲ್ ನ್ಯಾಯಾಲಯದ ಡಿಕ್ರಿ ಎಂಬಂತೆ ಅದೇ ರೀತಿಯಲ್ಲಿ ಅದನ್ನು ಜಾರಿಗೊಳಿಸತಕ್ಕದ್ದು.

**ವಿವರಣೆ:-**

ಈ ಪ್ರಕರಣದ ಮತ್ತು 5ನೇ ಪ್ರಕರಣದ ಉದ್ದೇಶಗಳಿಗಾಗಿ "ರಾಜ್ಯ ಜೈವಿಕವೈವಿಧ್ಯ ಮಂಡಳಿ" ಎಂಬ ಪದಾವಳಿಯು, ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಗುಂಪಿಗೆ 22ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಆ ಉಪ ಪ್ರಕರಣದ ಪರಂತುಕದ ಅಡಿಯಲ್ಲಿ ಪ್ರತ್ಯಾಯೋಜಿಸಲಾಗಿದೆಯೋ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪನ್ನು ಒಳಗೊಳ್ಳುತ್ತದೆ ಮತ್ತು ಈ ಪ್ರಕರಣದ ಅಡಿಯಲ್ಲಿ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಂದರ್ಭಾನುಸಾರ ಅಂಥ ವ್ಯಕ್ತಿ ಅಥವಾ ವ್ಯಕ್ತಿಗ ಳ ಗುಂಪಿಗೆ ನೀಡತಕ್ಕದ್ದು.

**54. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮಗಳ ರಕ್ಷಣೆ:-**

ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರ ಅಥವಾ ಕೇಂದ್ರ ಸರಕಾರದ ಅಥವಾ ರಾಜ್ಯ ಸರಕಾರದ ಯಾರೇ ಅಧಿಕಾರಿ ಅಥವಾ ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಯಾರೇ ಸದಸ್ಯ, ಅಧಿಕಾರಿ ಅಥವಾ ನೌಕರರ ವಿರುದ್ಧ ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಪ್ರಕಾರ್ಯಗಳ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**55. ದಂಡನೆಗಳು:-**

(1) 3ನೇ ಪ್ರಕರಣದ ಅಥವಾ 4ನೇ ಪ್ರಕರಣದ ಅಥವಾ 6ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಅಥವಾ ಉಲ್ಲಂಘಿಸಲು ದುಷ್ಪ್ರೇರಿಸಿದ, ಯಾರೇ ವ್ಯಕ್ತಿ ಐದು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾಗೃಹ ವಾಸದ ಶಿಕ್ಷೆಯೊಂದಿಗೆ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನಾರ್ಹನಾಗತಕ್ಕುದು ಮತ್ತು ಉಂಟು ಮಾಡಿದ ಹಾನಿಯು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ್ದರೆ, ಹಾನಿಗೆ ತಕ್ಕ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡನೀಯನಾಗತಕ್ಕದ್ದು.

(2) 7ನೇ ಪ್ರಕರಣದ ಉಪಬಂಧಗಳನ್ನು ಅಥವಾ 24ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿದ ಅಥವಾ ಉಲ್ಲಂಘಿಸುವುದಕ್ಕೆ ಪ್ರಯತ್ನಿಸಿದ ಅಥವಾ ಉಲ್ಲಂಘಿಸಲು ದುಷ್ಪ್ರೇರಿಸಿದ ಯಾರೇ ವ್ಯಕ್ತಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸದಿಂದ ಅಥವಾ ಐದು ಲಕ್ಷ ರೂಪಾಯಿಗ ಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡನೀಯನಾಗ ತಕ್ಕದ್ದು.

**56. ಕೇಂದ್ರ ಸರಕಾರ, ರಾಜ್ಯ ಸರಕಾರ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ, ರಾಜ್ಯ ಜೈವಿಕವೈವಿಧ್ಯ ಮಂಡಳಿಗಳ ನಿರ್ದೇಶನ ಅಥವಾ ಆದೇಶಗಳ ಉಲ್ಲಂಘನೆಗೆ ದಂಡನೆ:-**

ಕೇಂದ್ರ ಸರಕಾರ, ರಾಜ್ಯ ಸರಕಾರ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರ ಅಥವಾ ರಾಜ್ಯ ಜೈವಿಕವೈವಿಧ್ಯ ಮಂಡಳಿ ಇವುಗಳಿಂದ ನೀಡಲಾದ ಯಾವುದೇ ನಿರ್ದೇಶನ ಅಥವಾ ಮಾಡಲಾದ ಯಾವುವೇ ಆದೇಶಗಳನ್ನು ಯಾರೇ ಉಲ್ಲಂಘಿಸಿದ್ದು ಅದಕ್ಕೆ ಈ ಅಧಿನಿಯಮದ ಮೇರೆಗೆ ಯಾವುದೇ ಶಿಕ್ಷೆಯನ್ನು ಪ್ರತ್ಯೇಕವಾಗಿ ಉಪಬಂಧಿಸರದಿದ್ದಲ್ಲಿ, ಅವನು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಶುಲ್ಕದಿಂದ ಮತ್ತು ನಿರಂತರ ಉಲ್ಲಂಘನೆಗೆ ಅಂಥ ದೋಷ ಮುಂದುವರಿದ ಅವಧಿಯಲ್ಲಿ ಪ್ರತಿದಿನ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**57.ಸಂಸ್ಥೆಗಳಿಂದ ಅಪರಾಧ:**

(1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾದದ ಅಥವಾ ಉಲ್ಲಂಘನೆಯ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವರು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರ ದಂಡಿತರಾಗತಕ್ಕದ್ದು.

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಯಾರೇ ಅಂಥ ವ್ಯಕ್ತಿಯನ್ನು, ಅವನು ತಿಳಿವಳಿಕೆ ಇಲ್ಲದೆ ಈ ಅಪರಾದ ಅಥವಾ ಉಲ್ಲಂಘನೆಯನ್ನು ಮಾಡಿದ್ದಾನೆ ಎಂದು ಅಥವಾ ಅಂಥ ಅಪರಾಧವನ್ನು ಮಾಡುವುದನ್ನು ತಡೆಗಟ್ಟಲು ಅನು ಎಲ್ಲ ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂಬುದನ್ನು ಅವನು ರುಜುವಾತುಪಡಿಸಿದರೆ ಗಿರುಯಾಗಿಸತಕ್ಕುದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಆ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಮಾಡಲಾಗಿದೆ ಎಂದು ಅಥವಾ ಅದನ್ನು ಅವನ ಯಾವುದೇ ನಿರ್ಲಕ್ಷ್ಯತೆಗೆ ಅರೋಪಿಸಬಹುದಾಗಿದೆ ಎಂದು ರುಜುವಾತುಪಡಿಸಿದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಅಥವಾ ಉಲ್ಲಂಘನೆಯ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ಸದನುಸಾರವಾಗಿ ದಂಡಿತನಾಗತಕ್ಕುದು.

**ವಿವರಣೆ: ಈ ಪ್ರಕರಣದ ಉದ್ದೇಶಗಳಿಗಾಗಿ,-**

(ಎ) "ಕಂಪನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ.

(ಬಿ) ಒಂದು ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ, ಆ ಫರ್ಮಿನಲ್ಲಿನ ಪಾಲುದಾರ.

**58. ಸಂಜ್ಞೇಯ ಮತ್ತು ಜಾಮೀನೀಯವಲ್ಲದ ಅಪರಾಧ ಗಳು:-**

ಈ ಅಧಿನಿಯಮದ ಮೇರೆಗಿನ ಅಪರಾಧಗಳು ಸಂಜ್ಞೇಯವಾಗಿರತಕ್ಕುದು ಮತ್ತು ಜಾಮೀನೀಯವಲ್ಲದಾಗಿರತಕ್ಕುದು.

**59. ಇತರ ಅಧಿನಿಯಮಗಳೊಂದಿಗೆ ಈ ಅಧಿನಿಯಮ ಪರಿಣಾಮಕಾರಿಯಾಗಿರುವುದು:-**

ಈ ಅಧಿನಿಯಮದ ಉಪಬಂಧಗಳು ಅರಣ್ಯಗಳಿಗೆ ಅಥವಾ ವನ್ಯಜೀವಿಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ಇತರ ಕಾನೂನಿನಲ್ಲಿನ ಉಪಬಂಧಗಳಿಗೆ ಹೆಚ್ಚಿನದಾಗಿ ಮತ್ತು ಅವುಗಳನ್ನು ಅಲ್ಪೀಕರಿಸದೆ ಇರತಕ್ಕದ್ದು.

**60.ರಾಜ್ಯ ಸರಕಾರಗಳಿಗೆ ನಿರ್ದೇಶನಗಳನ್ನು ನೀಡುವ ಕೇಂದ್ರ ಸರಕಾರದ ಅಧಿಕಾರ:-**

ಕೇಂದ್ರ ಸರಕಾರವು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಆದೇಶದ ಯಾವುವೇ ಉಪಬಂಧಗಳನ್ನು ರಾಜ್ಯದಲ್ಲಿ ಜಾರಿಗೊಳಿಸುವಂತೆ, ಯಾವುದೇ ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

**61.ಅಪರಾಧಗಳ ಸಂಜ್ಞೇಯತೆ:-**

ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞೇಯತೆಯನ್ನು,-

ಎ) ಕೇಂದ್ರ ಸರಕಾರದಿಂದ ಅಥವಾ ಆ ಸರ್ಕಾರದಿಂದ ಈ ಬಗ್ಗೆ ಅಧಿಕೃತಗೊಳಿಸಲಾದ ಯಾರೇ ಪ್ರಾಧಿಕಾರಿ ಅಥವಾ ಅಧಿಕಾರಿಯಿಂದ ಅಥವಾ

ಬಿ) ಕೇಂದ್ರ ಸರಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಅಥವಾ ಹಿಂದೆ ಹೇಳಿದಂತೆ ಅಧಿಕೃತಗೊಳಿಸಲಾದ ಅಧಿಕಾರಿಗೆ ಅಂಥ ಅಪರಾಧದ ಬಗ್ಗೆ ಮತ್ತು ದೂರು ಸಲ್ಲಿಸುವ ತನ್ನ ಇಂಗಿತದ ಬಗ್ಗೆ ನಿಯಮಿಸಲಾದ ರೀತಿಯಲ್ಲಿ ಮೂವತ್ತು ದಿನಗ ಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ನೀಡಿದಂತಹ ಯಾರೇ ಪ್ರಯೋಜನ ಪಡೆಯುವ ಕ್ಲೇಮುದಾರನಿಂದ,

ಸಲ್ಲಿಸಿದ ದೂರಿನ ಮೇಲೆ ಹೊರತು ತೆಗೆದುಕೊಳ್ಳತಕ್ಕುದಲ್ಲ.

**62. ಕೇಂದ್ರ ಸರಕಾರದ ನಿಯಮ ರಚನಾಧಿಕಾರ:-**

(1) ಕೇಂದ್ರ ಸರಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗದಂತೆ, ಎಲ್ಲ ಅಥವಾ ಈ ಮುಂದಿನ ಯಾವುವೇ ವಿಷಯಗಳಿಗಾಗಿ ಅಂಥ ನಿಯಮಗಳನ್ನು ಉಪಬಂಧಿಸಬಹುದು, ಎಂದರೆ:-

ಎ) 9ನೇ ಪ್ರಕರಣದ ಮೇರೆಗೆ ಅಧ್ಯಕ್ಷ ಮತ್ತು ಸದಸ್ಯರ ಸೇವೆಯ ನಿಬಂಧನೆಗಳು ಮತ್ತು ಷರತ್ತು ಗಳು;

ಬಿ) 10ನೇ ಪ್ರಕರಣದ ಮೇರೆಗೆ ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

ಸಿ) ಸಭೆಗಳಲ್ಲಿ ವ್ಯವಹಾರಗಳನ್ನು ನಡೆಸುವುದರ ಸಂಬಂಧವಾಗಿ 12ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಪ್ರಕ್ರಿಯೆ;

ಡಿ) 19ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕೆಲವು ಚಟುವಟಿಕೆಗಳನ್ನು ನಡೆಸುವುದಕ್ಕೆ ಅರ್ಜಿಯ ನಮೂನೆ ಮತ್ತು ಶುಲ್ಕಗಳ ಸಂದಾಯ.

ಇ) 19ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಬೇಕಾದ ನಮೂನೆ ಮತ್ತು ರೀತಿ:

ಎಫ್) 20ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಜೈವಿಕ ಸಂಪನ್ಮೂಲ ಅಥವಾ ಜ್ಞಾನವನ್ನು ವರ್ಗಾ ಯಿಸುವುದಕ್ಕೆ ಅರ್ಜಿಯ ನಮೂನೆ ಮತ್ತು ರೀತಿ:

ಜಿ) 28ನೇ ಪ್ರಕರಣದ ಮೇರೆಗೆ, ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕ ನಮೂನೆ ಮತ್ತು ಪ್ರತಿಯೊಂದು ಹಣಕಾಸು ವರ್ಷದ ಅಂಥ ಅವಧಿ ಮತ್ತು ಅದರ ಲೆಕ್ಕ ಪರಿಶೋಧಿತ ಪ್ರತಿಯನ್ನು ಅದರ ಮೇಲೆ ತಯಾರಿಸಿದ ಲೆಕ್ಕಪರಿಶೋಧನಾ ವರದಿಯೊಂದಿಗೆ ಒದಗಿಸಬೇಕಾದ ಕೊನೆಯ ದಿನಾಂಕ:

ಹೆಚ್) 29ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಲೆಕ್ಕದ ವಾರ್ಷಿಕ ವಿವರಣಾ ಪತ್ರವನ್ನು ಸಿದ್ಧಪಡಿಸತಕ್ಕ ನಮೂನೆ:

ಐ) 50ನೇ ಪ್ರಕರಣದ ಮೇರೆಗೆ ಒಂದು ಅಪೀಲನ್ನು ಸಲ್ಲಿಸಬೇಕಾದ ಅವಧಿ ಮತ್ತು ಅದರ ನಮೂನೆ, ಅಪೀಲನ್ನು ಇತ್ಯರ್ಥಗೊಳಿಸಲು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ನ್ಯಾಯನಿರ್ಣಯದ ಪ್ರಕ್ರಿಯೆ:

ಜೆ) ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು 50ನೇ ಪ್ರಕರಣದ (6)ನೇ ಉಪ ಪ್ರಕರಣದ (ಎಚ್)ಖಂಡದ ಮೇರೆಗೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದಾದ, ಹೆಚ್ಚುವರಿ ವಿಷಯಗಳು:

ಕೆ) 61ನೇ ಪ್ರಕರಣದ (ಬಿ)ಖಂಡದ ಮೇರೆಗೆ ನೋಟೀಸು ನೀಡುವ ರೀತಿ:

ಎಲ್) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ, ಅಥವಾ ಉಪಬಂಧ ಕಲ್ಪಿಸುವುದಕ್ಕೆ ಸಂಬಂಧಪಟ್ಟ ಯಾವುದೇ ಇತರ ವಿಷಯ:

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕುದು, ಮತ್ತು ಮೇಲೆ ಹೇಳಿದ ದ ನಿಕಟ ತರುವಾಯದ ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಟನ್ನು ಮಾಡಬೇಕೆಂದೂ ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ ಅಥವಾ ವಿನಿಯಮವು ಆ ತರುವಾಯ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಾಕಾರಿಯಾಗತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

63. ರಾಜ್ಯ ಸರಕಾರದ ನಿಯಮ ರಚನಾಧಿಕಾರ:

(1) ರಾಜ್ಯ ಸರಕಾರವು, ರಾಜಪತ್ರದಲ್ಲಿ ಅಧಿಸೂಚನೆ ಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದಿನ ಅಧಿಕಾರದ ಸಾಮಾನ್ಯನ್ವಯಕ್ಕೆ ಪ್ರತಿಕೂಲವಾಗದಂತೆ ಎಲ್ಲ ಅಥವಾ ಈ ಮುಂದಿನ ಯಾವುವೇ ವಿಷಯಗಳಿಗೆ ಅಂಥ ನಿಯಮಗಳನ್ನು ಉಪಬಂಧಿಸಬಹುದು, ಎಂದರೆ:-

ಎ) 23ನೇ ಪ್ರಕರಣದ(ಸಿ) ಖಂಡದ ಮೇರೆಗೆ ರಾಜ್ಯ ಜೈವಿಕವೈವಿಧ್ಯ ಮಂಡಳಿಯಿಂದ ನಿರ್ವಹಿಸಬೇಕಾದ ಇತರ ಪ್ರಕಾರ್ಯಗಳು;

ಬಿ) 24ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಪೂರ್ವ ತಿಳಿವಳಿಕೆ ಪತ್ರವನ್ನು ನೀಡತಕ್ಕ ನಮೂನೆ;

ಸಿ) 33ನೇ ಪ್ರಕರಣದ ಮೇರೆಗೆ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕ ನಮೂನೆ ಮತ್ತು ಪ್ರತಿಯೊಂದು ಹಣಕಾಸು ವರ್ಷದ ಅಂಥ ಅವಧಿ;

ಡಿ) 34ನೇ ಪ್ರಕರಣದ ಮೇರೆಗೆ ರಾಜ್ಯ ಜೈವಿಕವೈವಿಧ್ಯ ಮಂಡಳಿಯ ಲೆಕ್ಕಗಳನ್ನು ನಿರ್ವಹಿ ಸುವ ಮತ್ತು ಲೆಕ್ಕ ಪರಿಶೋಧನೆ ಮಾಡಬೇಕಾದ ರೀತಿ ಮತ್ತು ಅದರ ಲೆಕ್ಕ ಪರಿಶೋಧಿತ ಪ್ರತಿಯನ್ನು ಅದರ ಮೇಲೆ ತಯಾರಿಸಿದ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಒದಗಿಸಬೇಕಾದ ಕೊನೆಯ ದಿನಾಂಕ;

ಇ) 37ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಪಾರಂಪರಿಕ ನಿವೇಶನಗಳ ನಿರ್ವಹಣೆ ಮತ್ತು ಸಂರಕ್ಷಣೆ;

ಎಫ್)44ನೇ ಪ್ರಕರಣದ(1)ನೇ ಉಪ ಪ್ರಕರಣದ ಮೇರೆಗೆ ಸ್ಥಳೀಯ ಜೈವಿಕವೈವಿಧ್ಯ ನಿಧಿಯ ನಿರ್ವಹಣೆ ಮತ್ತು ಅಭಿರಕ್ಷೆಯ ರೀತಿ ಮತ್ತು ಅಂಥ ನಿಧಿಯನ್ನು ವಿನಿಯೋಗಿಸ ಬೇಕಾದ ಉದ್ದೇಶಗಳು;

ಜಿ) 45ನೇ ಪ್ರಕರಣದ ಮೇರೆಗೆ ವಾರ್ಷಿಕ ವರದಿಯ ಪ್ರಪತ್ರ ಮತ್ತು 45ನೇ ಪ್ರಕರಣದ ಮೇರೆಗೆ ಪ್ರತಿಯೊಂದು ಹಣಕಾಸು ವರ್ಷದ ಅವಧಿಯಲ್ಲಿ ಅಂಥ ವರದಿಯನ್ನು ಸಿದ್ಧಪಡಿಸ ತಕ್ಕ ಅವಧಿ;

ಹೆಚ್) 46ನೇ ಪ್ರಕರಣದ ಮೇರೆಗೆ ಸ್ಥಳೀಯ ಜೈವಿಕವೈವಿಧ್ಯ ನಿಧಿಯ ಲೆಕ್ಕಗಳನ್ನು ನಿರ್ವಹಿಸುವ ಮತ್ತು ಲೆಕ್ಕ ಪರಿಶೋಧನೆ ಮಾಡಿಸುವ ರೀತಿ ಮತ್ತು ಅದರ ಲೆಕ್ಕ ಪರಿಶೋಧಿತ ಪ್ರತಿಯನ್ನು ಅದರ ಮೇಲೆ ತಯಾರಿಸಿದ ಲೆಕ್ಕ ಪರಿಶೋಧನಾ ವರದಿ ಯೊಂದಿಗೆ ಒದಗಿಸಬೇಕಾದ ಕೊನೆಯ ದಿನಾಂಕ;

ಐ) ನಿರ್ದಿಷ್ಟಪಡಿಸಬೇಕಾದ ಅಥವಾ ನಿರ್ದಿಷ್ಟ ಪಡಿಸಬಹುದಾದ ಯಾವುದೇ ಇತರ ವಿಷಯ;

3) ಈ ಪ್ರಕರಣದ ಮೇರೆಗೆ ರಾಜ್ಯ ಸರಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ,ಅದು ಎರಡು ಸದನಗಳನ್ನು ಒಳಗೊಂಡಿ ರುವಲ್ಲಿ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅಥವಾ ಅಂಥ ವಿಧಾನಮಂಡಲವು ಒಂದು ಸದನವನ್ನು ಒಳಗೊಂಡಿರುವಲ್ಲಿ, ಆ ಸದನದ ಮುಂದೆ ಇರಿಸತಕ್ಕದ್ದು.

**64. ವಿನಿಯಮಗಳ ರಚನಾಧಿಕಾರ:**

ರಾಷ್ಟ್ರೀಯ ಜೈವಿಕವೈವಿಧ್ಯ ಪ್ರಾಧಿಕಾರವು, ಕೇಂದ್ರ ಸರಕಾರದ ಪೂರ್ವಾನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗ ಳನ್ನು ಕಾರ್ಯಗತಗೊಳಿಸಲು ವಿನಿಯಮಗಳನ್ನು ರಚಿಸ ಬಹುದು.

**65. ತೊಂದರೆಗಳನ್ನು ನಿವಾರಿಸುವ ಅಧಿಕಾರ:**

(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸು ವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರಕಾರವು, ಆದೇಶದ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಹಾಗೆ ತೊಂದರೆಯನ್ನು ನಿವಾರಿಸಬಹುದು:

ಪರಂತು, ಯಾವುದೇ ಅಂಥ ಆದೇಶವನ್ನು ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

2) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇರಿಸತಕ್ಕದು.